
# ಕೆ. ವಿರೂಪಾಕ್ಷಗೌಡ

## ವ್ಯಕ್ತಿ ಪರಿಚಯ



ರಾಘವೇಂದ್ರ ದಂಡಿನ್

ಜನಪ್ರಿಯ ಜಾನಪದ ಪುಸ್ತಕ ಮಾಲೆ–೫೧

# ಕೆ. ವಿರೂಪಾಕ್ಷ ಗೌಡ

## ವ್ಯಕ್ತಿ ಪರಿಚಯ

ರಾಘವೇಂದ್ರ ದಂಡಿನ್

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಪತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–೫೬೦ ೦೫೪

**K.Virupaksha Gowda**- A Pen Portrait - By **Raghavendra Dandin.** Pulished by **Karnataka Janapada Parishathu.**
No. 1, Jaladarshini Layout, Near M. S. Ramaiah Hospital Gate, New BEL Road, Bangalore-560 054,
Phone : 080-23605033..Janapada Loka : 7201143

ಪ್ರಥಮ ಮುದ್ರಣ : ೨೦೧೦ ಪುಟಗಳು : ೩೬

ಪ್ರತಿಗಳು : ೨೦೦೦

ಬೆಲೆ : ರೂ. ೧೫ (ಹದಿನೈದು ರೂಪಾಯಿ)

ಹಕ್ಕುಗಳು : ಲೇಖಕರಿಗೆ ಸೇರಿವೆ

**ಗ್ರಂಥ ಪ್ರಕಟಣಾ ಸಲಹಾ ಸಮಿತಿ**

| | |
|---|---|
| **ನಾಡೋಜ ಡಾ॥ ಜಿ. ನಾರಾಯಣ** | ಅಧ್ಯಕ್ಷರು |
| **ಶ್ರೀ ಟಿ. ತಿಮ್ಮೇಗೌಡ** | ಸದಸ್ಯರು |
| **ಶ್ರೀಮತಿ ಇಂದಿರಾ ಬಾಲಕೃಷ್ಣ** | ಸದಸ್ಯರು |
| **ಶ್ರೀ ಗೊ. ರು. ಚನ್ನಬಸಪ್ಪ** | ಸದಸ್ಯರು |
| **ನಾಡೋಜ ಡಾ॥ ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ॥ ಎಂ. ಎ. ಜಯಚಂದ್ರ** | ಸದಸ್ಯರು |
| **ಪ್ರೊ. ಡಿ. ಲಿಂಗಯ್ಯ** | ಸಂಪಾದಕರು |
| **ಡಾ. ಚಕ್ಕೆರೆ ಶಿವಶಂಕರ್** | ಕಾರ್ಯದರ್ಶಿ-ಸಂಚಾಲಕರು |

ಮುದ್ರಕರು :
**ಚಂದನ ಪ್ರಿಂಟರ್ಸ್**
ನಂ. ೫೭, ವಿನಾಯಕ ಕಾಂಪ್ಲೆಕ್ಸ್
೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ
ಬ್ಯಾಂಕ್ ಕಾಲೋನಿ, ಬೆಂಗಳೂರು-೫೬೦ ೦೫೦

# ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ'ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ– ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ಅಥವಾ ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಲೇಖಕರಾದ **ರಾಘವೇಂದ್ರ ದಂಡಿನ್** ಅವರು **ಕೆ. ವಿರೂಪಾಕ್ಷ ಗೌಡ** ಅವರನ್ನು ಕುರಿತ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಜಿ. ನಾರಾಯಣ**
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು
೦೨-೦೫-೨೦೦೦

# ಕೆ. ವಿರೂಪಾಕ್ಷ ಗೌಡ

**ಪ್ರವೇಶ**

ಬಳ್ಳಾರಿ ಎಂದ ತಕ್ಷಣ ನೆನಪಿಗೆ ಬರುವುದು ಭಯಂಕರ ಬಿಸಿಲು, ಗಣಿ ಧೂಳು, ರಾಜಕೀಯ ಗೀಳು ! ಆದರೆ ಈ ಜಿಲ್ಲೆಯು ಅನಂತ ಕವಿ–ಸಾಹಿತಿ–ಕಲಾವಿದರನ್ನು ತನ್ನೊಡಲೊಳಗೆ ಇಟ್ಟುಕೊಂಡಿರುವುದು ಬಹುತೇಕರಿಗೆ ಗೊತ್ತಿರಲಿಕ್ಕಿಲ್ಲ. ಹಾಸ್ಯಬ್ರಹ್ಮ ಬೀಚಿ (ಭೀಮಸೇನ್ ರಾಯಸಂ) ದೈತ್ಯ ರಂಗಪ್ರತಿಭೆ ರಾಘವ, ಕೋವಿದರಾದ ಕೋ. ಚೆನ್ನಬಸಪ್ಪ, ಜಾನಪದ ಪರ್ವತಗಳಾದ ಜೋಳದರಾಶಿ ದೊಡ್ಡನಗೌಡ, ಮುದೇನೂರು ಸಂಗಣ್ಣ, ವಿದ್ವಾಂಸರುಗಳಾದ ವೈ. ನಾಗೇಶಶಾಸ್ತ್ರಿ, ಹೊಳಲು ಚಂದ್ರಶೇಖರ ಶಾಸ್ತ್ರಿ, ಹರಿದಾಸ ಪಂಥಕ್ಕೆ ಸೇರಿದ ಬಲು ಹಿಂದೆಯೇ ಆಗಿಹೋದ ಶ್ರೇಷ್ಠ ಮಹಿಳೆ ಹರಪನಹಳ್ಳಿ ಭೀಮವ್ವ, ಇತ್ತೀಚೆಗೆ ಪ್ರವರ್ಧಮಾನಕ್ಕೆ ಬಂದ ಪತ್ರಕರ್ತ ರವಿಬೆಳಗೆರೆ, ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಕುಂ. ವೀರಭದ್ರಪ್ಪ, ಅಭಿನಯ ಶಾರದೆ ಜಯಂತಿ, ಗೋಲ್ಡನ್ ಸ್ಟಾರ್ ಗಣೇಶ ಮೊದಲಾದವರೆಲ್ಲ ಬಳ್ಳಾರಿ ಮತ್ತು ಬಳ್ಳಾರಿ ಜಿಲ್ಲೆಯವರೇ.

ತನ್ನೊಡಲಲ್ಲಿ ಕಬ್ಬಿಣದ ಅದಿರಿನಂತೆ ಅಸಂಖ್ಯ ಪ್ರತಿಭೆಗಳನ್ನು ಇಟ್ಟುಕೊಂಡಿರುವ ಈ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಜಾನಪದ ಶ್ರೀಮಂತಿಕೆ ಮೆರೆದ ಅದೆಷ್ಟೋ ಪ್ರಖ್ಯಾತ ಕಲಾವಿದರೂ ಆಗಿಹೋಗಿದ್ದಾರೆ, ಈಗಲೂ ಇದ್ದಾರೆ. ದರೋಜಿಯ ಬುರ್ರಕಥಾ ಈರಮ್ಮ ಮತ್ತು ಯಡ್ರಾಮನ ಹಳ್ಳಿಯ ದೊಡ್ಡ ಭರಮಪ್ಪ ಮಂಚೂಣಿಯಲ್ಲಿ ಬರುತ್ತಾರೆ. ಇಂಥವರ ಸಾಲಿನಲ್ಲಿ ನಿಲ್ಲಬಹುದಾದ ಮತ್ತೊಂದು ಸೃಜನಶೀಲ, ಹೃದಯವಂತ, ಸರಳ ಸಜ್ಜನಿಕೆಯ ಕವಿ, ಜಾನಪದ ಜಟ್ಟಿ ಎಂದರೆ ಕೆ. ವಿರೂಪಾಕ್ಷಗೌಡರು.

ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ತುಂಗಭದ್ರೆಯ ಮಡಿಲಲ್ಲಿ ಮೈದಳೆದ ಪುಟ್ಟಗ್ರಾಮ ಬಾಚಿಗೊಂಡನಹಳ್ಳಿ. 'ಆಚಾರ ಹೇಳೋ ಬಾಚೇನಹಳ್ಳಿ' ಎಂದೇ ಪ್ರಸಿದ್ಧಿ ಪಡೆದ ಈ ಊರು ಜಾನಪದ ಕಲೆ–ಕಲಾವಿದರ ತವರೂರು. ಈ ಗ್ರಾಮದ ಅಭಿವೃದ್ಧಿಗೆ ಶ್ರಮಿಸಿದ್ದು 'ಕೊಟ್ರಗೌಡ್ರ' ಮನತೆನ. ಸುಸಂಸ್ಕೃತವೂ ಅಚ್ಚ ಕನ್ನಡತನವಿರುವ ಈ ನೆಲದ ಜಾನಪದ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ ಸಾಕಷ್ಟು ದುಡಿದ ಈ ಮನೆತನಕ್ಕೆ ರಾಜಕೀಯ ಸ್ಪರ್ಶವೂ ಇದೆ. ಹೀಗೆ ಜನಪದ ಸಂಸ್ಕೃತಿ, ಕನ್ನಡತನ, ರಾಜಕೀಯ ಸಂಸ್ಕಾರಗಳ ಸಂಯೋಜನೆಯಿರುವ ಮನೆತನದಲ್ಲಿ ಹುಟ್ಟಿ, ಜಾನಪದ ಕ್ಷೇತ್ರದಲ್ಲಿ ಸಾಹಿತ್ಯವಲಯದಲ್ಲಿ ಕೃಷಿಮಾಡಿ, ಮೇಣದ ಬತ್ತಿಯಂತೆ ತಮ್ಮನ್ನು ತಾವೇ ಸುಟ್ಟುಕೊಂಡು ಇತರರಿಗೆ ಬೆಳಕುನೀಡಿದ ಧೀಮಂತ ವ್ಯಕ್ತಿಯೇ ಶ್ರೀ ಕೆ. ವಿರೂಪಾಕ್ಷ ಗೌಡರು.

**ಆ ಕರಾಳ ದಿನ**

ಬಳ್ಳಾರಿ ಗಾಂಧಿ ಎಂದೇ ಖ್ಯಾತರಾಗಿದ್ದ ಕೆ. ಚೆನ್ನಬಸವನಗೌಡ್ರು ಹಿರಿಯ ಮುತ್ಸದ್ಧಿ, ರಾಜಕಾರಣಿಯಾಗಿದ್ದರು. ಸುಮಾರು 18 ವರ್ಷಗಳ ಕಾಲ ಶಾಸಕರಾಗಿ, ಒಂದು ಅವಧಿಗಾಗಿ ವಿಧಾನಪರಿಷತ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಜೀವನದ ಅರ್ಧ ಸಮಯವನ್ನು ರಾಜಕೀಯದಲ್ಲಿ ಕಳೆದರು. ಅಧಿಕಾರ ಹೊಂದಿದ್ದರೂ ಪ್ರಾಮಾಣಿಕತೆ ಅವರ ಉಸಿರಾಗಿತ್ತು. ಸರಳತೆ ಪ್ರಮುಖ ಲಕ್ಷಣವಾಗಿತ್ತು. ಅವರ ಪ್ರಕಾರ ಸಮಾಜ ಸೇವೆಯೆ ರಾಜಕೀಯ ಕೆಲಸವಾಗಿತ್ತು. ಮಹಾತ್ಮಗಾಂಧಿಜೀಯವರ ತತ್ವಾದರ್ಶನಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ಮಾಜಿ ಮುಖ್ಯಮಂತ್ರಿ ದಿ॥ ಎಸ್. ನಿಜಲಿಂಗಪ್ಪನವರ ಮಾರ್ಗದರ್ಶನದಲ್ಲಿ ಗ್ರಾಮಾಭಿವೃದ್ಧಿಗೆ ತಮ್ಮನ್ನು ತಾವು ತೊಡಗಿಸಿಕೊಂಡವರು. ಇವರ ಆತ್ಮಕತೆ 'ನಾನೊಬ್ಬ ಸಾರ್ವಜನಿಕ' ಕೃತಿಯು ಅವರ ಬದುಕಿಗೆ ಹಿಡಿದ ಕನ್ನಡಿ.

ವಿಧಿ ಯಾರನ್ನೂ ಕಾಡದೇ ಬಿಟ್ಟಿಲ್ಲ. 1935ರ ಜುಲೈ 1ನೇ ತಾರೀಖು

ಚನ್ನಬಸವನ ಗೌಡರ ಧರ್ಮಪತ್ನಿ ಶ್ರೀಮತಿ ಕಳಕಮ್ಮನವರು ಗಂಡು ಮಗುವಿಗೆ ಜನ್ಮ ನೀಡಿದ್ದರು. ಗೌಡರ ಸಂತೋಷಕ್ಕೆ ಮಿತಿಯೇ ಇರಲಿಲ್ಲ. ಆದರೆ ಆ ಸಂತೋಷ ಬಹಳ ಸಮಯ ಉಳಿಯಲಿಲ್ಲ. ಹೆರಿಗೆಯಿಂದ ಸ್ವಲ್ಪ ಸಮಯದಲ್ಲೇ ಅತಿಯಾದ ರಕ್ತಸ್ರಾವದಿಂದಾಗಿ ಕಳಕಮ್ಮನವರು ಕೊನೆಯುಸಿರೆಳೆದಿದ್ದರು. 'ಮಗುವಿನ ಜನನ ಮಾತೆಯ ಮರಣ' ಒಂದೇ ದಿನವಾದದ್ದು ವಿಧಯ ವಿಲಾಸ. ಆಗ ತಾನೆ ಜನಿಸಿದ ಶಿಶು ಮಾತೃವಿಯೋಗದಿಂದ ತಬ್ಬಲಿಯಾಗಿತ್ತು. ತಾಯಿಯ ಎದೆ ಹಾಲಿಲ್ಲದೆ ಅರಚಿ ಅರಚಿ ಮೈ ತಣ್ಣಗಾಗಿ ಕೈಕಾಲು ಸೆಟೆಸಿ ಮಗು ನಿಶ್ಯಬ್ಧವಾಗುತ್ತಿತ್ತು. ಮನೆ ಮಂದಿ ಎಲ್ಲಾ ಕಂಗಾಲಾಗುತ್ತಿತ್ತು. ಗೌಡರ ಮನಸ್ಸು ಕೊರಗಿ ಕೊರಗಿ ಸಣ್ಣಾಗುತ್ತಿತ್ತು.

ಕೆಲಸದಾಳು ಹೆಂಗಸರ ಮರುಕಕ್ಕೆ ಮಿತಿಯಿರಲಿಲ್ಲ. 'ಯವ್ವಾ ಏಟೊಂದು ಅಳತೈತಿ ಕೂಸು. ನಾನಾರ ಹೋಗಿ ಎದೀ ಹಾಲು ಕುಡಿಸ್ಲೇನ?' ಎಂದು ಭಾವೋದ್ವೇಗಕ್ಕೆ ಒಳಗಾಗಿ ಒಬ್ಬಾಕೆ ಹೇಳಿದರೆ; ಇನ್ನೊಬ್ಬಾಕೆ, 'ಏ ಸುಂಕೆ ಇರು. ನಾವು ಕೆಲಸದಾಳುಮಕ್ಳು.. ಆ ಕೂಸು ಗೌಡ್ರ ಮಕ್ಳು ಹೆಂಗಾತೈತೆ ?' ಎದು ಹೇಳಿ ಸಮಾಧಾನಪಡಿಸಿ ಕರೆದುಕೊಂಡು ಹೋಗುತ್ತಿದ್ದಳು. ದೇವರನಾಟಕವನ್ನು ಬಲ್ಲವರು ಯಾರು ? ಬಾಚಿಗೊಂಡನ ಹಳ್ಳಿಯಲ್ಲಿ ಕೂಲಿಕೆಲಸ ಮಾಡಿಕೊಂಡಿದ್ದ 'ಖಾಜಮ್ಮ' ಎಂಬ ಮುಸ್ಲಿಂ ಮಹಿಳೆ ಆ ಸಂದರ್ಭದಲ್ಲಿ ಬಾಣಂತಿ ಇದ್ದುದರಿಂದ, ಅವಳ ಮೊಲೆ ಹಾಲಲ್ಲಿ ಅರ್ಧ ಈ ಮಗುವಿಗೆ ಇನ್ನರ್ಧ ತಮ್ಮ ಮಗುವಿಗೆ ಕುಡಿಸಿ ಉಪಕರಿಸುವಂತೆ ಚೆನ್ನಬಸವನಗೌಡರು ವಿನಂತಿಸಿ, ಮನವೊಲಿಸಿದ್ದರು. ಅದರಂತೆ ಖಾಜಮ್ಮ ನಡೆದುಕೊಂಡಳು ಕೂಡ. ಇವಳ ಉಪಕಾರಕ್ಕೆ ಪ್ರತಿಯಾಗಿ ಕೆಲ ಚಿನ್ನದ ಆಭರಣ, ಉತ್ತಮ ಸೀರೆಗಳು, ಕುಪ್ಪಸ ಖಣಗಳು, ಧಾನ್ಯಗಳನ್ನು ನೀಡಿ ಖಾಜಮ್ಮ ಮತ್ತಾಕೆಯ ಕುಟುಂಬ ವರ್ಗದವರನ್ನು ಗೌಡರು ಸಂತೋಷಪಡಿಸಿದ್ದರು. ಲಿಂಗವಂತ

ತಾಯಿಯ ಉದರದಲ್ಲಿ ಹುಟ್ಟಿ, ಮುಸ್ಲಿಂ ತಾಯಿಯ ಮೊಲೆ ಹಾಲುಂಡು ಬೆಳೆದ ಮಗು ಬೇರಾರೂ ಅಲ್ಲ. ನಮ್ಮ ಗುರುಗಳಾದ ಜಾನಪದ ಜಟ್ಟಿ ಕೆ. ವಿರೂಪಾಕ್ಷ ಗೌಡರು !

**ಬಾಲ್ಯ, ಶಿಕ್ಷಣ, ಜಾನಪದ ಗೀಳು**

ಆರಂಭಿಕ ಶಿಕ್ಷಣವನ್ನು ಬಾಚಿಗೊಂಡನ ಹಳ್ಳಿಯಲ್ಲಿಯೇ ಮುಗಿಸಿದ ವಿರೂಪಾಕ್ಷಗೌಡರು, ಬಾಲ್ಯದ ದಿನಗಳಲ್ಲಿಯೇ ಜಾನಪದ ಕಲೆಗಳಲ್ಲಿ ಆಸಕ್ತಿ ತೋರಿಸತೊಡಗಿದರು. ತಂದೆ ಚೆನ್ನಬಸವನಗೌಡರ ಜೊತೆಯಲ್ಲಿ ಕೆಲಬಾರಿ ಕಾರ್ಯಕ್ರಮಗಳಿಗೆ ಹೋದಾಗ ಅಲ್ಲಿನ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಜಾನಪದ ಪ್ರದರ್ಶನಗಳನ್ನು ಕಂಡು ಅತ್ತ ಆಕರ್ಷಿತರಾದರು. ನಂದಿಕೋಲು, ವೀರಗಾಸೆ ನೃತ್ಯ, ಒಗಟುಗಳು ಮತ್ತು ಬಡಮುಗಳು, ಬೀಸೋಕಲ್ಲಿನ ಪದ, ಸೋಬಾನಪದ, ಡೊಳ್ಳುಕುಣಿತ, ರಾತ್ರಿಯ ಸಮಯದಲ್ಲಿ ನಡೆಯುತ್ತಿದ್ದ ಬಯಲಾಟ, ತೊಗಲು ಬೊಂಬೆಯಾಟ ಹೀಗೆ ಹತ್ತಾರು ಪ್ರಕಾರಗಳು ಬಾಲಕ ವಿರೂಪಾಕ್ಷನ ಚಿತ್ತವನ್ನಾವರಿಸಿದವು. ಆಕರ್ಷಣೆ ಸಹಜವಾಗಿ ಕುತೂಹಲಕ್ಕೆ ದಾರಿಯಾಯಿತು. ಅರಿತುಕೊಳ್ಳಲು ಮನವು ತುಡಿಯತೊಡಗಿತು. ಬಾಲಕ ಬೆಳೆದು ಯುವಕನಾದಾಗ ಜನಪದ ಕಲೆಗಳ ಬಗೆಗಿನ ಒಲವೂ ಕೂಡ ಯೌವ್ವನಾವಸ್ಥೆಗೆ ತಲುಪಿತು. 1958ರಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದಿಂದ ವಾಣಿಜ್ಯ ಪದವಿ ಸಂಪಾದನೆ ಮಾಡಿ ಹಳ್ಳಿಗೆ ಮರಳಿದ ಗೌಡರು ಆರಂಭಿಸಿದ್ದೇ ಜನಪದ ಗೀತೆ, ಪದ, ಒಗಟು, ಒಡಮು ಮೊದಲಾದವುಗಳ ಸಂಗ್ರಹ ಕಾರ್ಯ.

ಉದರ ಪೋಷಣೆಗಾಗಿ ಟ್ರಾನ್ಸ್‌ಪೋರ್ಟ್ ಉದ್ಯೋಗವೊಂದನ್ನು ಕೈಗೆತ್ತಿಕೊಂಡ ಗೌಡರು ತಮ್ಮ ಬಿಡುವಿನ ಸಮಯವನ್ನು ಜಾನಪದ ಕಲೆಗಾಗಿಯೇ ಮೀಸಲಿಟ್ಟರು. ಇವರ ಸಾಹಿತ್ಯ ಸೇವೆಗೆ ಕೊಂಚವೂ ಅಪಸ್ವರ ಎತ್ತದ ಧರ್ಮಪತ್ನಿ ಲಲಿತಮ್ಮ ಗೌಡರು ಜಾನಪದ ಸೇವೆಗೆಲ್ಲ

'ಸೋ' ಎನ್ನುತ್ತಾ ಬಂದರು. ಡಾ॥ ಶಿವರಾಂ ಕಾರಂತರ ಪರಮ ಸ್ನೇಹಿತ ಗುರುಮೂರ್ತಿ ಪೆಂಡಕೂರು, ಹಾ. ಮಾ ನಾಯಕ, ಮುದೇನೂರು ಸಂಗಣ್ಣ, ಕು. ಶಿ. ಹರಿದಾಸ ಭಟ್ಟ, ಕೋ. ಚೆನ್ನಬಸಪ್ಪ, ರಾಯಚೂರಿನ ಶಾಂತರಸ ಮೊದಲಾದಂಥ ದಿಗ್ಗಜರೊಡನೆ ಒಡನಾಟ, ಪತ್ರ ವ್ಯವಹಾರಗಳು ಗೌಡರ ಜನಪದ ಕಲೆ ಮತ್ತು ಸಾಹಿತ್ಯದ ಗೀಳು ದ್ವಿಗುಣಗೊಳ್ಳಲು ಕಾರಣವಾಯಿತು. ಗೀಳು ಪ್ರಾಮಾಣಿಕ ಪ್ರಯತ್ನಕ್ಕೆ ಇಂಬುಕೊಟ್ಟಿತು. ಪ್ರಯತ್ನ ಫಲಿಸಿ 23 ಕೃತಿಗಳು ಗೌಡರಿಂದ ಹೊರಬರುವಂತಾಯಿತು.

ಜಾನಪದ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ಮತ್ತು ಉತ್ಸಾಹ ತೋರಿಸಿದ್ದರ ಫಲವಾಗಿ 'ನಮ್ಮ ಹಳ್ಳಿಯ ಪದಗಳು', 'ಹೊಲಮನಿಯ ಪದಗಳು', 'ಜನಪದ ಸಾಹಿತ್ಯ', 'ನಮ್ಮ ಹಳ್ಳಿಯ ಕತೆಗಳು', 'ನಡಿಯಪ್ಪ ನಮ್ಮ ನಾಡಿಗೆ', 'ಮುತ್ತು ಹವಳ', 'ಮೊಹರಂ ಪದಗಳು' ಹೀಗೆ ಅನೇಕ ಪುಸ್ತಕಗಳು ಜನ್ಮ ತಳೆದವು. ಪುಸ್ತಕ ಪ್ರಕಾಶನ ಕಷ್ಟಸಾಧ್ಯವಾಗಿದ್ದ ಅಂದಿನ ದಿನಮಾನಗಳಲ್ಲಿ ಜಾನಪದ ಸರಕಿರುವ ಪುಸ್ತಕಗಳನ್ನು ಪ್ರಕಟಿಸಲು ಪ್ರಕಾಶಕರು ದುರ್ಲಭವಾಗಿದ್ದನ್ನು ಮನಗಂಡ ಗೌಡರು ಕೈಗೆತ್ತಿಕೊಂಡ ಮತ್ತೊಂದು ಸಾಹಸ ಕಾರ್ಯವೆಂದರೆ 'ಕೊಟ್ಟೂರೇಶ್ವರ ಪ್ರಕಾಶನ'ದ ಸ್ಥಾಪನೆ. ತನ್ಮೂಲಕ ಪುಸ್ತಕಗಳ ಪ್ರಕಟಣೆ. ಯಾರಲ್ಲೂ ಹಣ ಬೇಡದ ಇವರು ಇದಕ್ಕಾಗಿ ಧನ ಕರಗಿಸಿಕೊಂಡಿದ್ದಾರೆ. ತನು ಸೊರಗಿಸಿಕೊಂಡಿದ್ದಾರೆ. ಮನ ಹಣ್ಣಾಗಿಸಿಕೊಂಡಿದ್ದಾರೆ. ಜಾನಪದ ಸಾಹಿತ್ಯವನ್ನು ಸಂಪಾದಿಸಿ ಪ್ರಕಟಿಸುವ ಹವ್ಯಾಸದ ಜೊತೆಗೆ ಸ್ವರಚಿತ ಕವನ ಸಂಕಲನಗಳನ್ನೂ, ಪ್ರಬಂಧಗಳನ್ನೂ ಸೃಜಿಸಿದ್ದಾರೆ. ಇದಕ್ಕೆ ಇವರ ಸ್ವರಚಿತ ಕವನ ಸಂಕಲನಗಳಾದ 'ಸುಗ್ಗಿಯ ಕಣ', 'ಆಕಾಶ ಮಲ್ಲಿಗೆ', 'ಬಿಳಿಯ ಹಾಳೆಯ ಮೇಲೆ', 'ದರ್ಶನ', 'ಸಾಕ್ಷಿ', 'ಕರುಣೆ' ಪುಟನೀಡುತ್ತವೆ. ಮೈಸೂರು ವಿಶ್ವವಿದ್ಯಾಲಯದ 'ಪ್ರಬುದ್ಧ ಕರ್ನಾಟಕ', 'ಸುಧಾ', ಮತ್ತು ಸ್ಥಳೀಯ ಪತ್ರಿಕೆಗಳು ಇವರ ಕವನ ಮತ್ತು ಲೇಖನಗಳನ್ನು ಪ್ರಕಟಿಸಿವೆ.

ಗೌಡರ ಆತ್ಮೀಯ ಶಿಷ್ಯ ಬಳಗದವರಲ್ಲೊಬ್ಬರಾದ ಮೇಟಿ ಕೊಟ್ರಪ್ಪ ತಮ್ಮ ಲೇಖನವೊಂದರಲ್ಲಿ ಹೇಳುವಂತೆ 'ಬೆಳಗೀತು ಬಳ್ಳಾರಿ ಓ ಜನರೆ ಬನ್ನಿ' ಎಂದು ತಮ್ಮ ಸುತ್ತಲಿನ ಅನೇಕ ಸಾಹಿತ್ಯಾಸಕ್ತಿಯ ಜನರನ್ನ ಕೂಡಿಹಾಕಿಕೊಂಡು 'ಜನ ಸಾಹಿತ್ಯದ ಹಗರಿ'ಯನ್ನೇ ಹರಿಸಿದರು. ಅವರ ಜನಪದ ಸಂಗ್ರಹಗಳಾದ 'ನಮ್ಮ ಹಳ್ಳಿಯ ಕಥೆಗಳು', 'ಹಳ್ಳಿಯ ಪದಗಳು', 'ಹೊಲಮನಿಯ ಪದಗಳು', 'ಜನಪದ ಸಾಹಿತ್ಯ' ಮತ್ತು 'ಜನಪದ ಸಂಚಯ'ಗಳು ಇಲ್ಲಿನ ಬರಡುನೆಲದಿಂದ ಗೆಬರಿಕೊಂಡ ಉತ್ತಮ ಕಡಲೆ ಕಾಳುಗಳಾಗಿವೆ' ಎಂಬ ಸಾಲುಗಳು ಬಳ್ಳಾರಿ ಜಿಲ್ಲೆಯ ಜನಪದ ಸಾಹಿತ್ಯ, ಸಂಗ್ರಹ ಮತ್ತು ಪ್ರಕಟಣೆಯಂತಹ ಗುರುತರ ಕಾರ್ಯ ಎಷ್ಟರಮಟ್ಟಿಗೆ ಮಹತ್ವಪೂರ್ಣವಾಗಿದೆ ಎಂಬುದನ್ನು ತಿಳಿಸಿಕೊಡುತ್ತದೆ.

ಇವರ ಸಂಗ್ರಹ ಸಾಮರ್ಥ್ಯಕ್ಕೆ ದಣಿವೇ ಇರಲಿಲ್ಲ. ಈಗಿನಂತೆ ಗ್ರಂಥಾಲಯಕ್ಕೋ ವಾಚನಾಲಯಕ್ಕೋ ವೆಬ್‌ಸೈಟಿಗೋ ಇಂಟರ್‌ನೆಟ್‌ಗೋ ಹೋಗಿ ನೋಡಿ, ಸಂಗ್ರಹಿಸುವ ಕಾಲವಾಗಿರಲಿಲ್ಲ ಅಂದು. ಜಾನಪದರ ಊರು, ಕೇರಿ–ಮನೆಗಳಿಗೆ ಹೋಗಬೇಕು. ಸಂಪರ್ಕ, ಸಾರಿಗೆ ವ್ಯವಸ್ಥೆಯು ಸಮರ್ಪಕವಾಗಿ ಇಲ್ಲದಿರುವ ಆ ಕಾಲದಲ್ಲಿ ಎಷ್ಟೋ ಬಾರಿ ನಡೆದುಕೊಂಡು ಹೋಗಿದ್ದುಂಟು. ಈಗಿನಂತೆ ಧ್ವನಿಮುದ್ರಣವೂ ಅಷ್ಟು ಸುಲಭವಾಗಿರಲಿಲ್ಲ ಆಗ. ಕಲಾವಿದರ ಮನವೊಲಿಸಬೇಕು. ಅವರು ಹಾಡಿದ್ದನ್ನು, ಹೇಳಿದ್ದನ್ನು ಚಾಚೂತಪ್ಪದೆ ಬರೆದುಕೊಳ್ಳಬೇಕು. ಆನಂತರ ಸಂಗ್ರಹವಾದ ಬರಹಗಳನ್ನು ಪರಿಷ್ಕರಿಸಿ, ಸಂಸ್ಕರಿಸಿ ಪುಸ್ತಕ ರೂಪದಲ್ಲಿ ಹೊರತರಬೇಕು. ಇಷ್ಟೆಲ್ಲಾ ಮಾಡಬೇಕೆಂದರೆ ವರ್ಷಗಟ್ಟಲೇ ಸಮಯ ಬೇಕು. ಶ್ರಮ ಬೇಕು. ಹಣ ಬೇಕು. ಮುಖ್ಯವಾಗಿ ಹಿತಾಸಕ್ತಿ ಬೇಕು. ಇವೆಲ್ಲವೂ ಗೌಡರಲ್ಲಿ ಇದ್ದವು. ಮನೆತನದಿಂದ ಕೃಷಿಕರಾಗಿ, ಉದ್ಯೋಗದಿಂದ ವ್ಯಾಪಾರಿಗಳಾದ ಇವರು ಜನಪದ ಸಾಹಿತ್ಯ, ಪುಸ್ತಕ ಪ್ರಕಟಣೆ ಮತ್ತು ಪುಸ್ತಕಗಳ ಹಂಚಿಕೆ ವಿಷಯದಲ್ಲಿ ರೈತನ

ತ್ಯಾಗಬುದ್ಧಿಯನ್ನು ತೋರಿದರೆ ಹೊರತು ವ್ಯಾಪಾರಿ ಬುದ್ಧಿಯನ್ನಲ್ಲ. ಅಂದಿನ ದಿನಗಳಲ್ಲಿ ಇವರು ಸಂಗ್ರಹಿಸಿ, ಸಂಪಾದಿಸಿದ 'ಹೊಸ ಪ್ರವಾಹ', 'ನೈವೇದ್ಯ' (ಪ್ರಬಂಧಗಳು), 'ಹೂಗೊಂಚಲು', 'ಕಂಠೀಸರ', 'ಚೇತನ' (ಪದ್ಯ), 'ಪಂಪಾ ಸಂಪದ', 'ಪಂಪಾತುಂತುರ' ಮುಂತಾದ ಕೃತಿಗಳು ಇಂದು ತೋರಿಸಬೇಕೆಂದರೂ ಸಿಗುವುದಿಲ್ಲ. ಈಗಿನಂತೆ ಸರ್ಕಾರದ ಬಲ್ಕ್ ಪರ್ಚೇಜ್ ವ್ಯವಸ್ಥೆ ಗೌಡರಿಗೆ ಸಿಗದೇ ಇದ್ದುದರಿಂದ ಇವರ ಸಂಗ್ರಹಗಳಾದ 'ಗೊಂದಲಿಗರ ಹಾಡು', 'ಜೋಗತಿ ಪದ', 'ಕೋಲು ಪದ', 'ಹೆಣ್ಣು ಮಕ್ಕಳ ಹಾಡು', 'ಗಾದೆಗಳು', 'ಒಗಟುಗಳು' ಸೇರಿದಂತೆ ಅನೇಕ ಜನಪದ ರಾಶಿಯೇ ಅಪ್ರಕಟಿತಗಳಾಗಿ ಉಳಿದುಬಿಟ್ಟವು.

'ಬದುಕು ಜಟಕಾ ಬಂಡಿ ವಿಧಿ ಅದರ ಸಾಹೇಬ, ಮದುವೆಗೋ...? ಮಸಣಕೋ....' ಎಂಬಂತೆ ವಿಧಿ ಗೌಡರನ್ನು ಬಳ್ಳಾರಿ ಜಿಲ್ಲೆ ತೊರೆಯುವಂತೆ ಮಾಡಿತು. ಇವರ ಹಿರಿಯ ಮಗ ಕೆ. ಚಂದ್ರಶೇಖರ ಗೌಡರು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಸಂಗಾಪುರ ಗ್ರಾಮದಲ್ಲಿ ತುಂಗಭದ್ರಾ ಗ್ರಾಮೀಣ ಬ್ಯಾಂಕಿನ ಉದ್ಯೋಗಿಯಾಗಿದ್ದರಿಂದ, ಆ ಹೊತ್ತಿಗಾಗಲೇ ವಿರೂಪಾಕ್ಷಗೌಡರು ವೃದ್ಧಾಪ್ಯದ ಹೊಸ್ತಿಲಲ್ಲಿದ್ದುದರಿಂದ ಬಾಚಿಗೊಂಡನಹಳ್ಳಿ ತೊರೆದು ಸಂಗಾಪುರಕ್ಕೆ ಬಂದರು. ಜಿಲ್ಲೆ ಬದಲಾದರೂ ಸಾಹಿತ್ಯದ ಗೀಳು ಬದಲಾಗಲಿಲ್ಲ. ಜನ ಹೊಸಬರಾದರೂ ಜನಪದ ಸಾಹಿತ್ಯದಾಸಕ್ತಿ ಕುಗ್ಗಲಿಲ್ಲ. ಮೊದಲಿನಿಂದಲೂ ಪರಿಚಯವಿದ್ದ ಗಂಗಾವತಿಯ ಕನ್ನಡ ಪಂಡಿತ ಎಂ. ಲಕ್ಷ್ಮಣ, ವಿಚಾರವಾಗಿ ಎಸ್. ಜಿ. ಚೆನ್ನಳ್ಳಿ, ಕನ್ನಡ ಉಪನ್ಯಾಸಕ ವಿ. ಎಚ್. ನಾಯಕ, ಕೊಪ್ಪಳ ನಗರದ ಅಲ್ಲಮಪ್ರಭು ಬೆಟ್ಟದೂರು, ಎಸ್. ಎಸ್. ಪಾಟೀಲ, ವಿಠ್ಠಪ್ಪ ಗೋರಂಟ್ಲಿ, ಕೆ. ಬಿ. ಬ್ಯಾಳಿ ಹೀಗೆ ಅನೇಕ ಸತ್ವಯುತ ಬರಹಗಾರರ ಒಡನಾಟವನ್ನು ಮುಂದುವರೆಸಿದರು. ಬಳ್ಳಾರಿಯ ಕೆ. ವಿರೂಪಾಕ್ಷಗೌಡರು ಸಂಗಾಪುರ ಗ್ರಾಮದಲ್ಲಿದ್ದಾರೆ ಎಂಬ ವಿಷಯ ತಿಳಿಯುತ್ತಿದ್ದಂತೆಯೇ

ವಿಠ್ಠಪ್ಪ ಗೋರಂಟ್ಲಿ, ಕೆ. ಬಿ. ಬಾಳಿ, ಭೂ. ಮ. ಪ್ರಭುದೇವ ಮೊದಲಾದವರು ಭೇಟಿಕೊಟ್ಟು ಉಭಯ ಕುಶಲೋಪರಿ ಮಾಡಿಕೊಂಡು ತೆರಳುತ್ತಿದ್ದರು.

ಗೌಡರು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿಗೆ ಬಂದ ಅನಂತರ ಮಾಡಿದ ಮತ್ತೊಂದು ಸಾಹಸದ ಕೆಲಸವೆಂದರೆ, ಈಶಾನ್ಯ ಕರ್ನಾಟಕದ ಪ್ರಾತಿನಿಧಿಕ ಕವನ ಸಂಗ್ರಹ 'ನಕ್ಷತ್ರಗಳು' ಅನ್ನು ಹೊರಗೆ ತಂದಿದ್ದು. 1972ನೇ ಇಸ್ವಿಯಲ್ಲಿ ರಾಯಚೂರಿನ ಶಾಂತರಸರು ಹೊರಗೆ ತಂದ 'ಬೆನ್ನ ಹಿಂದಿನ ಬೆಳಕು' ಕವನ ಸಂಗ್ರಹದ ಅನಂತರ 2000ನೇ ಇಸ್ವಿಯಲ್ಲಿ ಬಂದ ಎರಡನೇ ಪ್ರಯತ್ನ ಇದಾಗಿದ್ದುದು ಇಲ್ಲಿ ಗಮನಾರ್ಹ. 28 ವರ್ಷಗಳ ಅನಂತರ ಇಂಥದೊಂದು ಕವನ ಸಂಗ್ರಹ ಗಂಗಾವತಿ ನಗರದಿಂದ ಹೊರಬಂದಿದೆ ಎಂದರೆ ಅದಕ್ಕೆ ಧೀಮಂತ ಸಾಹಿತಿಯಾದ ಕೆ. ವಿರೂಪಾಕ್ಷಗೌಡರು ಬಳ್ಳಾರಿ ತೊರೆದು ಇಲ್ಲಿಗೆ ಬಂದದ್ದರ ಫಲವೇ ಎಂಬುದರಲ್ಲಿ ಸಂದೇಹವೇ ಇಲ್ಲ. ಗೌಡರು ಗಂಗಾವತಿಗೆ ಬರುವವರೆಗೂ ಪುಸ್ತಕ ಪ್ರಕಟಣೆ, ಕವನ ಸಂಗ್ರಹ, ಸಾದರ ಸ್ವೀಕಾರ, ಸಗಟು ಖರೀದಿಗಳಂತಹ ಶಬ್ದಗಳನ್ನೇ ಕೇಳದ ಯುವಕವಿ ರಾಘವೇಂದ್ರ ದಂಡಿನ್‌ನಿಗೆ ಇಂತಹ ಒಂದು ಸಂಗ್ರಹ ಕಾರ್ಯದ ಗುರುತರವಾದ ಜವಾಬ್ದಾರಿಯನ್ನು ಕೊಟ್ಟು, ಸೂಕ್ತ ಸಲಹೆ ಮಾರ್ಗದರ್ಶನ ನೀಡಿ ಆತನನ್ನೆ ಕವನ ಸಂಗ್ರಹದ ಸಂಪಾದಕನ್ನಾಗಿಸಿದ್ದು ಅದರ ದೊಡ್ಡ ಗುಣ. ಕುರುಕ್ಷೇತ್ರ ಯುದ್ಧದಲ್ಲಿ ರಥದ ಸಾರಥಿಯಾಗಿ ಅರ್ಜುನನಿಗೆ ಯುದ್ಧದ ಜೊತೆಗೆ ಜೀವನದ ಮಾರ್ಗದರ್ಶನ ತೋರಿಸಿ ಪಾರುಮಾಡಿದ ಶ್ರೀ ಕೃಷ್ಣನಂತೆ ಗೌಡರು ಗೌರವ ಸಂಪಾದಕನ ಸ್ಥಾನದಲ್ಲಿದ್ದು ದಂಡಿನನ ಕಡೆಯಿಂದ ಅದ್ಭುತ ಕೆಲಸ ಮಾಡಿಸಿದ್ದಾರೆ' ಎಂದು ಪುಸ್ತಕ ಬಿಡುಗಡೆಯ ಸಮಾರಂಭದಲ್ಲಿ ಅಂದು ಕಾಂಗ್ರೆಸ್‌ನ ಯುವ ಮುಖಂಡರಾಗಿದ್ದ ಇಂದು ಮಾಜಿ ಸಚಿವರಾಗಿರುವ ಶ್ರೀ ಇಕ್ಬಾಲ್ ಅನ್ಸಾರಿ ಶ್ಲಾಘಿಸಿದ್ದರು.

## ಕವಿಸೈನ್ಯ ಕಟ್ಟಿದರು

ಕೆ. ವಿರೂಪಾಕ್ಷ ಗೌಡರದು ಪ್ರೋತ್ಸಾಹಿಸುವ ಗುಣ. ಮಾರ್ಗದರ್ಶನ ಮಾಡುವ ಸಹಜ ಸ್ವಭಾವ. ಕನ್ನಡನಾಡಿನ ಬಹುತೇಕ ವಿದ್ವಾಂಸರ, ಸಾಹಿತಿಗಳ, ಜಾನಪದ ದಿಗ್ಗಜರೊಂದಿಗೆ ಪತ್ರ ಸಂಪರ್ಕವಿಟ್ಟುಕೊಂಡಿದ್ದ ಇವರಿಗೆ ನಾನಾ ಮೂಲೆಗಳಿಂದ ನಾನಾ ರೀತಿಯ ಪತ್ರಿಕೆ, ಪುಸ್ತಿಕೆ, ಕಥಾ ಸಂಕಲನ, ಕವನ ಸಂಕಲನ, ಶಬ್ದಕೋಶಗಳು ಮೊದಲಾದ ಸಾಹಿತ್ಯ ಸರಕುಗಳು ಬರುತ್ತಿದ್ದವು. ಹೊಸದಾಗಿ ಮದುವೆಯಾದ ಹುಡುಗ ತನ್ನ ಹೆಂಡತಿಯನ್ನು ಪ್ರೀತಿಸುವಂತೆ ಗೌಡರು ಪುಸ್ತಕಗಳನ್ನು ಪ್ರೀತಿಯಿಂದ ಓದಿ ಮುಗಿಸುತ್ತಿದ್ದರು. ನನಗೆ ನೆನಪಿದ್ದುದರ ಮಟ್ಟಿಗೆ ಹೇಳುವುದಾದರೆ ಗೌಡರು ಓದಿ ಮುಗಿಸಿದ ವಿಷಯಗಳನ್ನೆಲ್ಲ ನೆನಪಿನಲ್ಲಿಟ್ಟುಕೊಂಡಿರುತ್ತಿದ್ದರು. ಯಾರೇ ಆಗಲಿ, ಯಾವ ವಿಷಯದ ಬಗ್ಗೆ ಆಗಲಿ ಕೇಳಿದರೆ ಸಾಕು ಅರಳು ಹುರಿದಂತೆ ಮಾತನಾಡುತ್ತಿದ್ದರು. ಕೆಲವೊಮ್ಮೆ ಅವರ ವಾಕ್ಚಾತುರ್ಯ, ಸ್ಮರಣ ಶಕ್ತಿ, ವಿವರಿಸುವ ಶೈಲಿಗಳನ್ನು ನೋಡಿದರೆ ಪುಸ್ತಕಗಳಿಗೆ ಬಾಯಿ ಬಂದಿದೆ ಎನ್ನಿಸಿಬಿಡುತ್ತಿತ್ತು. ಅಷ್ಟರಮಟ್ಟಿಗೆ ಅಸ್ಖಲಿತವಾಗಿತ್ತು ಅವರ ವಾಗ್ಝರಿ.

ತಮಗಿಂತ ಕಿರಿಯರಿಗೆ ವಿವಿಧ ಪುಸ್ತಕಗಳನ್ನು ಕೊಟ್ಟು ಓದಿಸುವುದು, ಸಾಹಿತ್ಯದಭಿರುಚಿಯನ್ನು ಮೂಡಿಸುವುದು ಗೌಡರ ಮತ್ತೊಂದು ಲಕ್ಷಣ. ಹೀಗೆ ತಮ್ಮಲ್ಲಿನ ಅಪಾರವಾದ ಪುಸ್ತಕಗಳನ್ನು ಹಂಚಿ, ಓದಿಸಿ, ಅಗತ್ಯ ಬಿದ್ದರೆ ವಿವರಿಸಿ, ಸಾಹಿತ್ಯದ ಗೀಳನ್ನಂಟಿಸಿ ಶಿಷ್ಯ ಸಮೂಹವನ್ನು ನಿರ್ಮಿಸಿದರು. ತಮ್ಮ ಮಾತೃ ಜಿಲ್ಲೆಯಾದ ಬಳ್ಳಾರಿಯಲ್ಲಿ ಈಗ ಹೆಸರು ಮಾಡಿರುವ ಕುಂ. ವೀರಭದ್ರಪ್ಪ ಹುರಕಡ್ಲಿ; ಶಿವಕುಮಾರ, ಮೇಟಿಕೊಟ್ರಪ್ಪ, ಉ. ಶಾ. ಬಸವಣ್ಣೆಪ್ಪ, ಹೊ. ಮ. ಪಂಡಿತಾರಾಧ್ಯ, ಬಿಳಿಗೆರೆ ಪಾರ್ವತಮ್ಮ, ಚಂ. ಪಾಟೀಲ, ದೇಶಿ., ಪಂಚಯ್ಯ, ಜಿ. ವಿ. ಆಡೂರು, ಹಿ. ಮ. ಕೊಟ್ರಯ್ಯ, ಸಾಹಿತ್ಯಾನಂದ, ಬಸವೇಗೌಡ, ಗುರುಬಸವರಾಜ, ತಿಂದಪ್ಪ, ನರಸಿಂಹಕುಮಾರ, ಅಲ್ಲಾಮಿಯಾ ಮೊದಲಾದವರು ಈ ಹಿಂದೆ ಗೌಡರ

ಮಾರ್ಗದರ್ಶನ ಪಡೆದವರೇ. ಅವರ ಸಹವಾಸ ಮಾಡಿದವರೇ.

ತಮ್ಮ ಇಳಿವಯಸ್ಸಿನಲ್ಲಿ ಕೊಪ್ಪಳ ಜಿಲ್ಲೆಗೆ ಬಂದ ಗೌಡರು ಇಲ್ಲೂ ಸುಮ್ಮನೆ ಕೂಡಲಿಲ್ಲ. ಇಲ್ಲಿರುವ ಸಾಹಿತ್ಯಾಸಕ್ತರನ್ನು ಗುರುತಿಸಿ, ತಮ್ಮ ಅನುಭವಗಳ ಧಾರೆ ಎರೆದು ಕೆಲವು ಯುವಕವಿಗಳನ್ನು ಸಿದ್ಧಗೊಳಿಸಿದರು. ಭರಮಪ್ಪ ಚಿಲಗೋಡು, ರಾಘವೇಂದ್ರ ದಂಡಿನ್, ಶರಣಪ್ಪ ಮೆಟ್ರಿ, ಐ. ಎಂ. ಕುಂಬಾರ, ನಾರಾಯಣ ಕಂದಗಲ್, ಶ್ರೀಮತಿ ಅಲಕನಂದಾ, ವ್ಹಿ. ಯುವ್ ವರ್ಣೇಕರ್ ಹೀಗೆ ಹತ್ತಾರು ಕವಿಪ್ರತಿಭೆಗಳು ಗೌಡರ ಮಾರ್ಗದರ್ಶನದಲ್ಲಿ ಪ್ರವರ್ಧಮಾನಕ್ಕೆ ಬಂದರು. ಒಟ್ಟಾರೆಯಾಗಿ ಕೆ. ವಿರೂಪಾಕ್ಷ ಗೌಡರು ಉಭಯ ಜಿಲ್ಲೆಗಳಲ್ಲಿ ಕವಿಗಳ ಸೈನ್ಯವನ್ನೇ ಕಟ್ಟಿದರು. 'ಹೂವಿನ ಜೊತೆಗೆ ನಾರೂ ಕೂಡ ಸ್ವರ್ಗಕ್ಕೆ ಹೋಗುತ್ತದೆ' ಎಂಬ ನಾಣ್ಣುಡಿ ಗೌಡರು ಮತ್ತು ಅವರ ಶಿಷ್ಯ ಬಳಗವನ್ನು ನೋಡಿದಾಗ ಅನ್ವರ್ಥಕವೆನಿಸುತ್ತದೆ.

'ವಿರೂಪಾಕ್ಷಗೌಡರು ತಾವು ಬರೆಯುವುದಕ್ಕಿಂತ ಮುಖ್ಯವಾಗಿ ಒಂದು ಕವಿ ಪೀಳಿಗೆಯನ್ನೇ ಸೃಷ್ಟಿಸಿದರು'. ಎಂದು ಹೋ. ಮ. ಪಂಡಿತಾರಾಧ್ಯರು ಒಂದು ಕಡೆ ಹೇಳಿರುವುದನ್ನು ಇಲ್ಲಿ ಸ್ಮರಿಸಬಹುದು. ಕವಿಯೊಬ್ಬ ಜನಪದ ಕಲಾವಿದನೊಬ್ಬ ತಾನು ಸೃಜಿಸಿದ ಕೃತಿಗಳಿಗಿಂತ ಕೃತಿಗಳನ್ನು ಸೃಷ್ಟಿಸುವ ಶಿಷ್ಯಬಳಗವನ್ನು ಪ್ರವರ್ಧಮಾನಕ್ಕೆ ತರುವುದು ಹೆಚ್ಚು ಅರ್ಥಪೂರ್ಣವೆಂದು ಇವರು ಮನಗಂಡಿರಬೇಕು. ಇಲ್ಲದೇ ಹೋಗಿದ್ದರೆ ಆಲದಮರದಂತೆ ತಾವು ಮಾತ್ರ ಬೃಹದಾಕಾರವಾಗಿ ಬೆಳೆದು ಅಕ್ಕ-ಪಕ್ಕದ ಸಸ್ಯಸಂಕುಲವನ್ನು ತನ್ನ ವಿಶಾಲವಾದ ನೆರಳಿನಡಿ ಬೆಳೆಯದಂತೆ ನೋಡಿಕೊಳ್ಳುವ ಎಷ್ಟೋ ಜನ ದಿಗ್ಗಜರಂತೆ ಇವರೂ ಕೂಡ ಆಗಿಬಿಟ್ಟಿರುತ್ತಿದ್ದರು. ತಮ್ಮ ಸಮಯ-ಶ್ರಮ ಮತ್ತು ಹಣವನ್ನು ಜನಪದ ಸಾಹಿತ್ಯದ ಸಂಗ್ರಹ, ಸಂಪಾದನೆ, ಮುದ್ರಣ ಮಾಡಿ, ಪುಸ್ತಕಗಳನ್ನು ಉಚಿತವಾಗಿ ಹಂಚುವುದು, ಸಾಹಿತ್ಯ ಓದಲು ಹಚ್ಚಿ ಅಭಿರುಚಿ

ಮೂಡಿಸುವುದು, ಸೂಕ್ತ ಮಾರ್ಗದರ್ಶನ ಮತ್ತು ಸಲಹೆ ನೀಡುವುದು ಮುಂತಾದ ಚಟುವಟಿಕೆಗಳಲ್ಲಿ ಕಳೆದುಕೊಂಡರು. 'ವಿರೂಪಾಕ್ಷಗೌಡರು ವ್ಯಕ್ತಿತ್ವ, ಬದುಕು ಮತ್ತು ಬರಹ' ಪುಸ್ತಕದಲ್ಲಿ ಕಾದಂಬರಿಕಾರ ಕುಂ. ವೀರಭದ್ರಪ್ಪನವರು 'ತೀರ ಒಂದು ಸಾಂಪ್ರದಾಯಿಕ ಚೌಕಟ್ಟಿನಿಂದ ಹೊರಗಿದ್ದು, ಸಾಮಾಜಿಕ ಕಷ್ಟನಿಷ್ಠುರಗಳ ನಡುವೆ ಗೌಡರು ಬೆಳೆದಿದ್ದೇ ಆಗಿದ್ದರೆ ಅವರೊಬ್ಬ ಶ್ರೇಷ್ಠ ಸಾಹಿತ್ಯಿಕ ಅಥವಾ ಸಾಮಾಜಿಕ ಹರಿಕಾರರಾಗಿಬಿಡುವ ಸಾಧ್ಯತೆ ಇತ್ತು' ಎಂದು ಹೇಳಿರುವುದು ಈ ಮೊದಲಿನ ಅಭಿಪ್ರಾಯವನ್ನೇ ಧ್ವನಿಸುತ್ತದೆ.

ಇಂದಿನ ಯಾವುದೇ ಕ್ಷೇತ್ರದಲ್ಲಿ ಬೆಳೆಯಬೇಕೆಂದರೂ Talent ಒಂದಿದ್ದರೆ ಸಾಲದು. ಜೊತೆಗೆ Self expression talent ಕೂಡ ಬೇಕು. ಅದು ಗೌಡರಿಗೆ ಗೊತ್ತಿತ್ತು. ತಾನು ಬೆಳೆಯುವುದಕ್ಕಿಂತ ತನ್ನಂತಹ ನೂರಾರು ಜನಪದ ಕವಿ-ಕವಯತ್ರಿಯರು ಬೆಳೆಯಬೇಕೆಂಬ ಮಹದಾಸೆ ಗೌಡರ ಮನದಾಳದಲ್ಲಿ ಬೇರೂರಿತ್ತು. ತಮ್ಮ ಸುತ್ತಮುತ್ತಲಿನವರೆಲ್ಲ ಸಾಹಿತ್ಯದ ಗೀಳನ್ನಂಟಿಸಿಕೊಳ್ಳಬೇಕು, ಸಾಹಿತ್ಯ ನಿಂತ ನೀರಾಗದೆ, ಜೀವಂತವಾಗಿರಬೇಕೆಂಬ ಹೆಬ್ಬಯಕೆ ಗೌಡರದಾಗಿತ್ತು.

ತಮ್ಮ ಒಡನಾಟಕ್ಕೆ ಬಂದ ಪ್ರತಿಯೊಬ್ಬ ಯುವಕವಿ, ಬರಹಗಾರರಿಗೆ ಊಟ, ಉಪಹಾರೋಪಚಾರಗಳನ್ನು ಕೊಟ್ಟು ಮೊದಲು ಹೊಟ್ಟೆ ತಣ್ಣಗಾಗಿಸಿ, ಅನಂತರ ನೆತ್ತಿಗೆ ಮೇವೊದಗಿಸುವುದು ಗೌಡರ ಮತ್ತೊಂದು ವಿಶಿಷ್ಟ ಗುಣವಾಗಿತ್ತು. 'ಪೆಹಲಾ ಪೆಠೋಬ ಬಾದ್ಮೆ ವಿಠೋಬ' ಎಂದು ಮರಾಠಿ ಭಾಷೆಯ ನಾಣ್ಣುಡಿಯನ್ನು ಉಲ್ಲೇಖಿಸಿ, ಆತಿಥ್ಯ ಸ್ವೀಕರಿಸಲು ಮುಜುಗರಕ್ಕೆ ಒಳಗಾದ ಯುವಮಿತ್ರರಿಗೆ ತಮಾಷೆಮಾಡುತ್ತಿದ್ದರು. ಇಂತಹ ತಮಾಷೆಯ ಮಾತುಗಳು ಗೌಡರ ಬಾಯಿಯಿಂದ ಬರುವುದು ತೀರಾ ವಿರಳವೇ ಆದರೂ ಆಗಾಗ ಈ ರೀತಿಯ ಮಾತುಗಳನ್ನಾಡಿ 'ಮಾತು-ಬೇಸರ'ವಾಗದಂತೆ ನೋಡಿಕೊಳ್ಳುವುದು ಇವರ ಸ್ವಭಾವವಾಗಿತ್ತು.

ಮುಖನೋಡಿ ಮನಸ್ಸನ್ನು ಓದುವ ಕಲೆಯೂ ಗೌಡರಿಗೆ ಕರಗತವಾಗಿತ್ತು.

**ಕೊಟ್ಟೂರೇಶ್ವರ ಪ್ರಕಾಶನ**

ಪುಸ್ತಕ ಪ್ರಕಟಣೆ, ಮಾರಾಟ, ಹೂಡುವ ಹಣ, ಲಾಭ ಮೊದಲಾದ ಪ್ರಕ್ರಿಯೆಗಳು ನಡೆಯುವುದು ತೀರಾ ಕಷ್ಟಕರವಾಗಿದ್ದ ಅಂದಿನ ದಿನಗಳಲ್ಲಿ ಗ್ರಾಮೀಣ ಪ್ರದೇಶಗಳ ಜನಪದ ಗೀತೆಗಳನ್ನು ಸಂಗ್ರಹಿಸಿ ಮುದ್ರಿಸುವ ಗೋಜಿಗೆ ಹೋಗುವವರು ಯಾರು ? ಈ ಜನರ ಜನಸಾಹಿತ್ಯಕ್ಕೆ ಮುದ್ರಣದ ಮೂರ್ತರೂಪವನ್ನು ಕೊಡುವವರು ಯಾರು ? ಹೀಗೆ ಸ್ಥಿತಿ ಮುಂದುವರೆದರೆ ಜನಪದ ಸಾಹಿತ್ಯ ಜನಪದರೊಂದಿಗೆ ಮಣ್ಣಲ್ಲಿ ಮಣ್ಣಾಗಿ ಹೋಗುವುದನ್ನು ತಪ್ಪಿಸಲು, ಜನಪದರ ನಾಲಿಗೆಯ ಮೇಲೆ ಸುಳಿದಾಡುವ ಪದಗಳಿಗೆ ಅಕ್ಷರ ರೂಪಕೊಟ್ಟು ಹಾಳೆಯ ಮೇಲೆ ದಾಖಲೆಯನ್ನಾಗಿಸಲು ವಿರೂಪಾಕ್ಷಗೌಡರು ಮತ್ತೊಂದು ದಿಟ್ಟ ಹೆಜ್ಜೆಯನ್ನಿಟ್ಟರು. ಕೊಟ್ಟೂರೇಶ್ವರ ಪ್ರಕಾಶನವನ್ನು ಸ್ಥಾಪಿಸಿದರು.

1958ರಲ್ಲಿ ಸ್ಥಾಪನೆಗೊಂಡ ಕೊಟ್ಟೂರೇಶ್ವರ ಪ್ರಕಾಶನದಿಂದ ಮೊದಲ ಮುದ್ರಣವಾಗಿ ತಮ್ಮ ಕವನ ಸಂಗ್ರಹ 'ಸುಗ್ಗಿಯ ಕಣ'ವನ್ನು ಹೊರತಂದ ವಿರೂಪಾಕ್ಷ ಗೌಡರು, 1959ರಲ್ಲಿ ಚಂದ್ರಶೇಖರ ಪಾಟೀಲರೊಡಗೂಡಿ 'ಹೊಸಪ್ರವಾಹ' ಎಂಬ ಪ್ರಬಂಧ ಸಂಗ್ರಹವನ್ನು ಬೆಳಕಿಗೆ ತಂದರು. ಇಲ್ಲಿಂದ ಶುರುವಾಯ್ತು ಗೌಡರ ಮುದ್ರಣ ಸಾಹಸ. ಆಗಿನ್ನೂ ಪುಸ್ತಕ ಪ್ರಕಟಣೆಗೆ ಪ್ರಾಯೋಜಕರಾಗುವ, ದೇಣಿಗೆ ನೀಡುವ ಮತ್ತು ಪುಸ್ತಕದ ಮುಖಬೆಲೆ ಪಾವತಿಸಿ ಖರೀದಿಸಿ ಪ್ರೋತ್ಸಾಹಿಸುವ ಮನೋಧೋರಣೆ ಬಹುತೇಕರಲ್ಲಿ ಇನ್ನೂ ಬೇರೂರದ ಕಾಲವದು. ಆಗ ಕೈಗೊಂಡ ಮತ್ತೊಂದು ಕಾಯಕವೆಂದರೆ, ಮುದ್ರಣ ವೆಚ್ಚವನ್ನು ಸ್ವಂತ ಜೇಬಿನಿಂದ ಭರಿಸುವುದು, ಮುದ್ರಣಗೊಂಡ ಪುಸ್ತಕಗಳನ್ನು ಆಸಕ್ತ-ಆಪ್ತವಲಯದಲ್ಲಿ ಪುಕ್ಕಟೆಯಾಗಿ ಹಂಚಿಬಿಡುವುದು !

1960ರಲ್ಲಿ ಹಿ. ಮ. ಪಂಚಯ್ಯನವರ 'ಕಾವ್ಯಾವತರಣ' ಎಂಬ ಕವನ ಸಂಗ್ರಹವನ್ನು ಪ್ರಕಟಿಸಿದ ಈ ಪ್ರಕಾಶನ, 1961 ಕೆ. ವಿರೂಪಾಕ್ಷ ಗೌಡರ ಕವನ ಸಂಗ್ರಹ 'ಆಕಾಶಮಲ್ಲಿಗೆ'ಯನ್ನು ಪ್ರಕಟಿಸಿತು. 1962ರಲ್ಲಿ ವಿರೂಪಾಕ್ಷ ಮತ್ತು ಶಿವಾನಂದಯ್ಯನವರ ಕವನ ಸಂಗ್ರಹ 'ಹೂಗೊಂಚಲು', '1963ರಲ್ಲಿ ಕೆ. ವಿರೂಪಾಕ್ಷಗೌಡರ ಕವನ ಸಂಗ್ರಹ 'ಬಿಳಿಯ ಹಾಳೆಯ ಮೇಲೆ', 1966ರಲ್ಲಿ ಕೆ. ವಿರೂಪಾಕ್ಷ ಗೌಡರ ಕವನ ಸಂಗ್ರಹ 'ದರ್ಶನ', ಅವರದೇ ಮೊತ್ತೊಂದು ಕವನಸಂಗ್ರಹ 'ಸಾಕ್ಷಿ'ಯನ್ನು 1967ರಲ್ಲಿ ಕ್ರಮವಾಗಿ ಪ್ರಕಾಶಿಸುತ್ತಾ ಬಂದಿತು.

ಮುಂದೆ ಶುರುವಾದದ್ದೇ ಜನಪದ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆ. ಕೆ. ವಿರೂಪಾಕ್ಷಗೌಡರಿಗೆ ಜನಪದ ಸಾಹಿತ್ಯ ಸಂಗ್ರಹ ಮತ್ತು ಪ್ರಕಟಣೆಯ ದಾಹ ವಿಪರೀತವಾಗಿತ್ತು ಎಂಬುದು ಅವರ ಸಂಗ್ರಹ ಮತ್ತು ಕೊಟ್ಟೂರೇಶ್ವರ ಪ್ರಕಾಶನದ ಮೂಲಕ ಮಾಡಿಸಿದ ಅವುಗಳ ಪ್ರಕಟಣೆಯನ್ನು ನೋಡಿದರೆ ತಿಳಿದುಬರುತ್ತದೆ. 1968ರಲ್ಲಿ ಇಂದಿನ ಹಿರಿಯ ಜಾನಪದ ವಿದ್ವಾಂಸರಾದ ಮುದೆನೂರು ಸಂಗಣ್ಣನವರೊಡಗೂಡಿ ಸಂಗ್ರಹಿಸಿದ ಜನಪದ ಗೀತೆಗಳನ್ನು 'ಹಳ್ಳಿಯ ಪದಗಳು' ಎಂಬ ಹೆಸರಿನ ಪುಸ್ತಕವನ್ನು ಗೌಡರು ಪ್ರಕಟಿಸಿದ್ದಾರೆ. 1969ರಲ್ಲಿ 'ಹೊಲಮನಿಯ ಪದಗಳು' ಎಂಬ ಜನಪದ ಸಂಗ್ರಹವನ್ನು, 1959ರಲ್ಲಿ ಲದಾಫ್ ಹಕೀಂ ಸಾಹೇಬರೊಡಗೂಡಿ ಸಂಗ್ರಹಿಸಿದ 'ನೈವೇದ್ಯ' ಎಂಬ ಪ್ರಬಂಧ ಸಂಗ್ರಹವನ್ನು, ತಮ್ಮದೇ ಆದ 'ಕಾಳು-ಕಡ್ಡಿ' ಕವನ ಸಂಕಲನವನ್ನು, 1972ರಲ್ಲಿ ಕೆ. ವಿರೂಪಾಕ್ಷ ಗೌಡರೊಂದಿಗೆ, ಕಲ್ಲೇಶ ಇಟಗಿ, ಕರಿವೀರನಗೌಡ ಕೂಡಿಕೊಂಡು ಸಂಪಾದಿಸಿದ 'ಜನಪದ ಸಾಹಿತ್ಯ' ಎಂಬ ಪುಸ್ತಕವನ್ನು ಕೊಟ್ಟೂರೇಶ್ವರ ಪ್ರಕಾಶನದಿಂದ ಪ್ರಕಟಿಸಿದ್ದಾರೆ.

ಜನಪದ ಸಾಹಿತ್ಯವನ್ನು ಪ್ರಕಟಿಸಬೇಕೆಂಬ ಉದ್ದೇಶದಿಂದಲೇ ಸ್ಥಾಪಿಸಿದ ಕೊಟ್ಟೂರೇಶ್ವರ ಪ್ರಕಾಶನದಿಂದ ಸ್ವರಚಿತ ಕವನಸಂಕಲನ, ಸಂಪಾದಿತ ಕವನ ಸಂಕಲನ, ಉದಯೋನ್ಮುಖ ಸಾಹಿತಿಗಳ ಕೃತಿಗಳು

ಸೇರಿದಂತೆ ಅನೇಕ ಪುಸ್ತಕಗಳನ್ನು ಪ್ರಕಟಿಸಿರುವುದು ಸಾಹಸವೇ ಸರಿ ಇವರೀ ಕಾಯಕಕ್ಕೆ ಬೆಂಬಲ ಎನ್ನುವಂತೆ ಹಗರಿಬೊಮ್ಮನಹಳ್ಳಿಯ ರಾಮನಗರದ ಯುವಕರ ಸಂಘವೂ ಕೂಡ ಅನೇಕ ಹೊತ್ತಿಗೆಗಳಿಗೆ ದಾರಿ ತೋರಿಸಿದೆ. ಗೌಡರ ಪರಮ ಸ್ನೇಹಿತರೂ, ಬಳ್ಳಾರಿ ಜಿಲ್ಲೆಯ ಮತ್ತೊಬ್ಬ ಕ್ರಿಯಾಶೀಲ ಪ್ರಭಾವಿ ಸಾಹಿತಿಗಳೂ ಆದ ಗುರುಮೂರ್ತಿ ಪೆಂಡಕೂರರು ಇವರ ಬೆಂಬಲಕ್ಕೆ ನಿಂತು ಸಂಗ್ರಹ ಕಾರ್ಯಗಳಲ್ಲಿ ಗೌಡರ ಸಮನಾಗಿ ಕೆಲಸ ಮಾಡಿರುವುದು ಅವರ ಪ್ರಕಟಗೊಂಡ ಪುಸ್ತಕಗಳನ್ನೋದಿದಾಗ ತಿಳಿದುಬರುತ್ತದೆ. 1979ರಲ್ಲಿ ಬಳ್ಳಾರಿ ಜಿಲ್ಲೆಯ ಜನಪದ ಸಾಹಿತ್ಯ ಸಂಗ್ರಹವಾದ 'ಜಾನಪದ ಸಂಚಯ' ಮತ್ತು 'ಮುತ್ತು ಹವಳ' ಹೊತ್ತಿಗೆಗಳ ಹೊರಬಂದಾಗ, ಗುರುಮೂರ್ತಿ ಪೆಂಡಕೂರರು ಶ್ರಮದಲ್ಲಿ ಸಮಭಾಗ ವಹಿಸಿಕೊಂಡಿದ್ದರೆಂಬುದು ತಿಳಿದುಬರುತ್ತದೆ. 1968ರಲ್ಲೇ ಗೌಡರು ಹೊರತಂದಿದ್ದ ಕವನ ಸಂಗ್ರಹ 'ಕಂಠಿಸರ'ದ ಸಂಗ್ರಹ ಕಾರ್ಯದಲ್ಲಿ ಗುರುಮೂರ್ತಿ ಪೆಂಡಕೂರು ಮತ್ತು ಎನ್. ಹನುಮಂತ ಶೆಟ್ಟಿ ಸಹಕರಿಸಿದ್ದರು. 1970ರಲ್ಲಿ ಬೆಳಕು ಕಂಡ ಬಳ್ಳಾರಿ ಜಿಲ್ಲಾ ಪ್ರಾತಿನಿಧಿಕ ಪ್ರಬಂಧ ಸಂಗ್ರಹ 'ಚೇತನ'ಕ್ಕೆ ಸಾಹಿತ್ಯಾನಂದರು ಸಹಕಾರ ನೀಡಿದ್ದರು. ಜಿಲ್ಲಾ ಪ್ರಾತಿನಿಧಿಕ ಕಥಾಸಂಗ್ರಹ 'ಪಂಪಾತುಂತುರ' 1972ರಲ್ಲಿ ಪ್ರಕಟವಾಯ್ತು. ಇದಕ್ಕೆ ಗೌಡರೊಂದಿಗೆ ಕನಕಗಿರಿಯ ಜಯತೀರ್ಥ ರಾಜಪುರೋಹಿತ, ಗುರುಮೂರ್ತಿ ಪೆಂಡಕೂರು, ಎನ್. ಹನುಮಂತಶೆಟ್ಟಿ ಕೈ ಜೋಡಿಸಿದ್ದರು. ಈ ಎಲ್ಲ ಸನ್ನಿವೇಶಗಳನ್ನು ನೋಡಿದರೆ ಯಾವ ಕೆಲಸಕ್ಕೇ ಆಗಲಿ ವಿರೂಪಾಕ್ಷ ಗೌಡರು ಒಂಟಿಯಾಗಿ ಕೈ ಹಾಕದೇ ಸಮಾನ ಮನಸ್ಕ ಮತ್ತು ಸಮಾನ ಆಸಕ್ತ ಸ್ನೇಹಿತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಾಂಘಿಕ ಪ್ರಯತ್ನ ಮಾಡುತ್ತಿದ್ದರು ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ.

ಕೊಟ್ಟೂರೇಶ್ವರ ಪ್ರಕಾಶನ, ರಾಮನಗರ ಯುವಕರ ಸಂಘ (ರಿ.), ಕನ್ನಡ ಸಾಹಿತ್ಯ ಪರಿಷತ್ತು ಸೇರಿದಂತೆ ಕೆಲವು ಪ್ರಕಾಶನಗಳ ಮೂಲಕ

ವಿರೂಪಾಕ್ಷಗೌಡರು ಪ್ರಕಟಿಸಿದ ಒಟ್ಟು ಕೃತಿಗಳ ಸಂಖ್ಯೆ 23. ಇವುಗಳಲ್ಲಿ 6 ಕವನ ಸಂಕಲನಗಳು, 8 ಜನಪದ ಸಂಗ್ರಹಗಳು, 5 ಜಿಲ್ಲಾ ಪ್ರಾತಿನಿಧಿಕ ಪ್ರಬಂಧ ಸಂಗ್ರಹಗಳು. 1. ಜಿಲ್ಲಾ ಪ್ರಾತಿನಿಧಿಕ ಕಥಾ ಸಂಗ್ರಹ, 2. ಜಿಲ್ಲಾ ಸಾಹಿತ್ಯ ಸಮ್ಮೇಳದ ಸ್ಮರಣ ಗ್ರಂಥಗಳು. 1 ಜರ್ಮನಿ ದೇಶದ ಪರಿಚಯ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕು ಕುಕನೂರಿನ ಶಕುಂತಲಾ ಪ್ರಕಾಶನವು ಭರಮಪ್ಪ ಚಿಲಗೋಡು ಮತ್ತು ಅಕ್ಬರ್ ಸಿ. ಕಾಲಿಮಿರ್ಚಿ ಗೌಡರ ಸಮಗ್ರ ಕವನ ಸಂಕಲನ 'ಆಕಾಶಮಲ್ಲಿಗೆ'ಯನ್ನು 1999ರಲ್ಲಿ ಪ್ರಕಟಿಸುವ ಮೂಲಕ ಅವರಿಗೆ ಗೌರವ ಸಲ್ಲಿಸಿದೆ. ಅಲ್ಲದೇ ಕೊಪ್ಪಳ ಜಿಲ್ಲೆಯ ಗಂಗಾವತಿಯ ರಾಘವೇಂದ್ರ ದಂಡಿನ್ ಸಂಪಾದಿಸಿದ ಈಶಾನ್ಯ ಕರ್ನಾಟಕದ ಪ್ರಾತಿನಿಧಿಕ ಕವನ ಸಂಗ್ರಹ 'ನಕ್ಷತ್ರಗಳು' ಕೃತಿಯ ಗೌರವ ಸಂಪಾದಕರಾಗಿದ್ದು ಗೌಡರ ಹೆಚ್ಚುಗಾರಿಕೆಯನ್ನು ತೋರಿಸಿಕೊಡುತ್ತದೆ.

ಇವು ಗೌಡರ ಕೃತಿ ಪ್ರಕಟಣೆಗಳ ಯಶೋಗಾಥೆಯಾದರೆ ಬಿಡಿ ಲೇಖನಗಳು, ಕಥೆಗಳು, ಪ್ರಬಂಧಗಳು ಮತ್ತು ಕವನಗಳು ನಾಡಿನ ಉದ್ದಗಲಕ್ಕೂ ಹರಡಿರುವ ವಿವಿಧ ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ, ದ್ವೈಮಾಸಿಕ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದಕ್ಕೆ ಲೆಕ್ಕವೇ ಇಲ್ಲ. 'ಪ್ರಬುದ್ಧ ಕರ್ನಾಟಕ', 'ಕರ್ನಾಟಕ ಭಾರತಿ', 'ಸಾಧನೆ', 'ಕನ್ನಡ ನುಡಿ', 'ಸಂಕ್ರಮಣ', 'ಜನಪದ', 'ಪ್ರಪಂಚ', 'ಜನಪ್ರಗತಿ', 'ಸುಧಾ', 'ಗೋಕುಲ', 'ಪ್ರಜಾಮತ', 'ಮಲೆನಾಡು', 'ಜಯಂತಿ', 'ಹೇಮಕೂಟ', 'ಸ್ಫೂರ್ತಿ', 'ಕರ್ಮವೀರ', 'ರೈತ', 'ಸ್ವತಂತ್ರ', 'ಪ್ರತಿಬಿಂಬ', 'ಕೊಡಗು'..... ಹೀಗೆ ಪತ್ರಿಕೆಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಬೇರೆ ಬೇರೆ ಲೇಖಕರ, ಕವಿಗಳ, ಸಾಹಿತಿಗಳ ಬರಹಗಳನ್ನು ತಮ್ಮ ಸಂಗ್ರಹಗಳಲ್ಲಿ ಕ್ರೋಢೀಕರಿಸಿ ಮುದ್ರಿಸಿದ ಗೌಡರು ತಮ್ಮ ಲೇಖನ,

ಪ್ರಬಂಧ, ಕಥೆ, ಕವನಗಳು ಬೇರೆಯವರ ಸಂಪಾದಕತ್ವದಲ್ಲೂ ಹೊರಬಂ.. ಹೊತ್ತಿಗೆಗಳಿಗೂ ಕಳಿಸಿಕೊಟ್ಟಿದ್ದಾರೆ. ಇವರ ಬಿಡಿ ಲೇಖನ, ಪ್ರಬಂಧ, ಕಥೆ, ಕವನಗಳು, 'ಕಾರಂತ ಪ್ರಪಂಚ', 'ಕಣ್ಮಣಿ', 'ಜಯದೇವಿ ತಾಯಿ', 'ಕರ್ನಾಟಕ ರತ್ನ', 'ಗಾಂಧಿ ಶತಾಬ್ದಿ ದೀಪ', 'ನಗೆನಂದನ', 'ಸುಹಾಸ', 'ಕನ್ನಡ ಕವಿಕಾವ್ಯ ಪರಿಚಯ', 'ಸಂಕ್ರಮಣ ಕಾವ್ಯ', 'ಸಮರ ಕವನ ಸಂಕಲನ', 'ಕರ್ನಾಟಕ ಜನಪದ ಕಥೆಗಳು' ಮೊದಲಾದ ಗ್ರಂಥಗಳಲ್ಲಿ ಓದಲು ಸಿಗುತ್ತವೆ.

ಹೀಗೆ ಗೌಡರು ಮಾಡಿದ ಜನಪದ ಸಾಹಿತ್ಯ ಮತ್ತು ಇತರೆ ಸಾಹಿತ್ಯ ಕೆಲಸ ಅಪಾರವಾದದ್ದು. ಅವರದು ದಣಿವರಿಯದ ದಡಿತ. ತೀರದ ಕಾಯಕದಾಹ. 50 ಪೈಸೆ, 1 ರೂಪಾಯಿ, 2 ರೂಪಾಯಿ ಮುಖಬೆಲೆಯ ಪುಸ್ತಕಗಳನ್ನು ಕೊಂಡು ಓದದ ಜನರಿಗೆ ಪುಕ್ಕಟೆಯಾಗಿ ಹಂಚಿ ಸಾಹಿತ್ಯಾಭಿರುಚಿ ಮೂಡಿಸುವ ಗೀಳು ಗೌಡರದು. ವಂಶಪರಾಂಪರ್ಯವಾಗಿ ಕೃಷಿಮಾಡುವುದು ಇವರ ಮನೆತನಕ್ಕೆ ಬಂದ ಸಹಜ ಗುಣ. ಗೌಡರ ಇದೇ ಕೃಷಿಯನ್ನು ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಮಾಡಿದ್ದಾರೆ. ಜಾತಿಯ ಎತ್ತುಗಳು ಜೀವನ ಪರ್ಯಂತ ಹೊಲಗಳಲ್ಲಿ ದುಡಿಯುವಂತೆ ವಿರೂಪಾಕ್ಷ ಗೌಡರು ಜಾನಪದ ಕ್ಷೇತ್ರದಲ್ಲೂ ದುಡಿದಿದ್ದಾರೆ. ಮಣ್ಣಲ್ಲಿ ಮಣ್ಣಾಗಿ ಹೋಗುವ ಹಂತದಲ್ಲಿದ್ದ ಈ ಸಾಹಿತ್ಯವನ್ನು ಹೆಕ್ಕಿ ತೆಗೆದಿದ್ದಾರೆ. ಒಂದುಗೂಡಿಸಿದ್ದಾರೆ. ಪುಸ್ತಕ ರೂಪದಲ್ಲಿ ಅದರ ಜೀವ ಉಳಿಸಿ ಕಳೆ ತಂದಿದ್ದಾರೆ. ನಾಡಿನ ಜನತೆಗೆ ಮಹದುಪಕಾರ ಮಾಡಿದ್ದಾರೆ.

### ಕೆ. ವಿರೂಪಾಕ್ಷಗೌಡರ ಪ್ರಕಟಿತ ಪುಸ್ತಕಗಳು

1. ಸುಗ್ಗಿಯ ಕಣ (ಕವನಗಳು 1958)
2. ಆಕಾಶಮಲ್ಲಿಗೆ (ಕವನಗಳು 1960)
3. ಬಿಳಿಯ ಹಾಳೆಯ ಮೇಲೆ (ಕವನಗಳು ಕವನಗಳು 1963)
4. ದರ್ಶನ (ಕವನಗಳು 1966)

5. ಸಾಕ್ಷಿ (ಕವನಗಳು 1967)
6. ಕರುಣೆ (ಕವನಗಳು 1972)
7. ಹಳ್ಳಿಯ ಪದಗಳು (ಜನಪದ ಸಂಗ್ರಹ 1968)
8. ಹೊಲಮನಿಯ ಪದಗಳು (ಜನಪದ ಸಂಗ್ರಹ 1964)
9. ಜನಪದ ಸಾಹಿತ್ಯ (ಜನಪದ ಸಂಗ್ರಹ 1973)
10. ನಮ್ಮ ಹಳ್ಳಿಯ ಕಥೆಗಳು (ಜನಪದ ಸಂಗ್ರಹ 1975)
11. ಮುತ್ತು-ಹವಳ (ಜನಪದ ಸಂಗ್ರಹ 1993)
12. ನಡಿಯಪ್ಪ ನಮ್ಮ ನಾಡಿಗೆ (ಡೊಳ್ಳಿನ ಪದಗಳು 1981)
13. ಜನಪದ ಸಂಚಯ (ಜನಪದ ಸಂಗ್ರಹ 1972)
14. ತೊಗಲು ಬೊಂಬೆಯಾಟ ಜರ್ಮನಿ ಪ್ರವಾಸ (ಜನಪದ ಸಂಗ್ರಹ 1987)
15. ಹೊಸಪ್ರವಾಹ (ಜಿಲ್ಲಾ ಪ್ರಾತಿನಿಧಿಕ ಪ್ರಬಂಧ ಸಂಗ್ರಹ 1963)
16. ನೈವೇದ್ಯ (ಜಿಲ್ಲಾ ಪ್ರಾತಿನಿಧಿಕ ಪ್ರಬಂಧ ಸಂಗ್ರಹ 1959)
17. ಹೂಗೊಂಚಲು (ಜಿಲ್ಲಾ ಪ್ರಾತಿನಿಧಿಕ ಪ್ರಬಂದ ಸಂಗ್ರಹ 1968)
18. ಕಂಠಿಸರ (ಜಿಲ್ಲಾ ಕವನ ಸಂಗ್ರಹ (1968)
19. ಚೇತನ (ಜಿಲ್ಲಾ ಪ್ರಾತಿನಿಧಿಕ ಪ್ರಬಂಧ ಸಂಗ್ರಹ 1970)
20. ಪಂಪಾಸಂಪದ ಭಾಗ-1 (ಜಿಲ್ಲಾ ಸಾಹಿತ್ಯ ಸಮ್ಮೇಳನದ ಸ್ಮರಣ ಗ್ರಂಥ 1970)
21. ಪಂಪಾಸಂಪದ ಭಾಗ-2 (ಜಿಲ್ಲಾ ಸಾಹಿತ್ಯ ಸಮ್ಮೇಳನದ ಸ್ಮರಣ ಗ್ರಂಥ 1972)
22. ಪಂಪಾತುಂತುರ (ಜಿಲ್ಲಾ ಪ್ರಾತಿನಿಧಿಕ ಕಥಾ ಸಂಗ್ರಹ (1972)
23. ಜರ್ಮನಿಯ ವೈಚಿತ್ರ್ಯ (ಜರ್ಮನಿ ದೇಶದ ಪರಿಚಯ 2003)
24. ಆಕಾಶಮಲ್ಲಿಗೆ (ಸಮಗ್ರ ಕಾವ್ಯ *1999)
25. ನಕ್ಷತ್ರಗಳು (ಈಶಾನ್ಯ ಕರ್ನಾಟಕದ ಪ್ರಾತಿನಿಧಿಕ ಕವನ ಸಂಗ್ರಹ 2000) ಗೌರವ ಸಂಪಾದಕರು ಕೆ. ವಿರೂಪಾಕ್ಷಗೌಡರು

**ತೊಗಲು ಬೊಂಬೆಯಾಟ**

ಕರ್ನಾಟಕದ ಜನಪದ ಕಲೆಗಳು ಅನಂತ. ಅವುಗಳ ಪಟ್ಟಿ ಮಾಡುವುದು ಸಾಹಸವೇ ಸರಿ. ಇವುಗಳಲ್ಲಿ ಪರಿಣಾಮಕಾರಿ, ಪ್ರಭಾವಿ ಮತ್ತು ಮನೋರಂಜಕವಾಗಿರುವುದು, ತೊಗಲು ಬೊಂಬೆಯಾಟ. ಇದರಲ್ಲಿ ಚಿತ್ರಕಲೆ, ಪ್ರದರ್ಶನ ಕಲೆ, ಗಾಯನ ಕಲೆ, ಸಂಭಾಷಣಾ ಕಲೆ ಮಿಳಿತಗೊಂಡಿವೆ. ಚರ್ಮದ ಮೇಲೆ ರಾಮಾಯಣ, ಮಹಾಭಾರತ ಪಾತ್ರಗಳನ್ನು ಮೂಡಿಸಿ, ಬಣ್ಣಹಚ್ಚಿ ಬಿಳಿಪರದೆಯ ಮೇಲೆ ಮೂಡಿಸಿ ಕತೆ ಹೇಳುತ್ತಾ ಹೋಗುವುದಕ್ಕೆ ತೊಗಲು ಬೊಂಬೆಯಾಟ ಎನ್ನುತ್ತಾರೆ.

ತೊಗಲಿನ ಬೊಂಬೆಗಳನ್ನು ನಿರ್ಮಿಸುವುದು ಕಷ್ಟಸಾಧ್ಯವಾದ ಅಪರೂಪದ ಕಲೆ. ಜಿಂಕೆಯ ಇಲ್ಲವೆ ಆಡಿನ ಚರ್ಮವನ್ನು ಪಾರದರ್ಶಕವಾಗುವಷ್ಟು ಹದಮಾಡಿ, ಅದರ ಮೇಲೆ ಚೂಪಾದ ಆಯುಧದಿಂದ ಬೇಕಾದ ಚಿತ್ರ ಬಿಡಿಸಲಾಗುತ್ತದೆ. ಗಿಡಮೂಲಿಕೆ, ಕಾಯಿ, ಹೂವುಗಳಿಂದ ಬಣ್ಣ ತಯಾರಿಸಿ ಆಯಾ ಚಿತ್ರಗಳಿಗೆ ಬಣ್ಣ ಕೊಡಲಾಗುತ್ತದೆ. ಬಿದಿರು ಅಥವಾ ಈಚಲ ಕಡ್ಡಿಯಿಂದ ಗೊಂಬೆಗಳನ್ನು ಹಿಡಿದು ನಿಲ್ಲಿಸಲು ಬರುವಂತೆ ಜೋಡಿಸಲಾಗುತ್ತದೆ. ಕತ್ತಲಿನಲ್ಲಿ ಬಿಳಿ ಪರದೆಯ ಹಿಂದೆ ಹರಳೆಣ್ಣೆಯ ದೀಪ ತೂಗುಹಾಕಿ, ದೀಪಕ್ಕೆ ಅಡ್ಡಲಾಗಿ ಈ ಗೊಂಬೆಗಳನ್ನು ಹಿಡಿದಾಗ ವರ್ಣರಂಜಿತವಾದ ಚಿತ್ರಗಳು ಪರದೆಯ ಮೇಲೆ ಮೂಡುತ್ತವೆ. ಕಿಳ್ಳೇಕ್ಯಾತ ಪಂಗಡದವರ ಮೇಳಗಾರಿಕೆ ಚಿತ್ರಗಳಿಗೆ ಧ್ವನಿಯಾಗುತ್ತದೆ. ನೋಡನೋಡುತ್ತಿದ್ದಂತೆಯೇ ಕಣ್ಣೆದುರಿಗೆ ಕತೆಯೊಂದು ನಡೆಯುತ್ತಾ ಹೋಗುತ್ತದೆ. ಇಂತಹ ನೆರಳು ವಿಸ್ಮಯ ಲೋಕವೊಂದನ್ನು ನೋಡುಗರಿಗೆ ತೋರಿಸುವ ಯಡ್ರಾಮನ ಹಳ್ಳಿಯ ಕಿಳ್ಳೇಕ್ಯಾತರ ದೊಡ್ಡಭರಮಪ್ಪನವರ ಹೆಸರು ಅತ್ಯಂತ ಪ್ರಮುಖವಾದದ್ದು. ಕುಗ್ರಾಮವೊಂದರಲ್ಲಿ ಹುಟ್ಟಿ, ವಿಸ್ಮಯಕರ ನೆರಳು ಬೊಂಬೆಯಾಟ (ತೊಗಲು ಬೊಂಬೆಯಾಟ)ವನ್ನು ಕರಗತ ಮಾಡಿಕೊಂಡ ದೊಡ್ಡ ಭರಮಪ್ಪನವರು

ಪಶ್ಚಿಮ ಜರ್ಮನಿವರೆಗೆ ತೆರಳಿ, ಅಲ್ಲಿನ ವಿವಿಧ ನಗರಗಳಲ್ಲಿ ಕರ್ನಾಟಕದ ಈ ಜನಪದ ಕಲೆಯನ್ನು ಪ್ರದರ್ಶಿಸಿ, ಮೆಚ್ಚುಗೆ ಗಳಿಸಿದ್ದು ಸಣ್ಣ ವಿಷಯವೇನಲ್ಲ. ಇಲ್ಲಿ ಹೇಳಿಕೊಳ್ಳಲೇ ಬೇಕಾದ ಪ್ರಮುಖ ವಿಷಯವೆಂದರೆ ಯಡ್ರಾಮನಹಳ್ಳಿಯ ದೊಡ್ಡಭರಮಪ್ಪ ಮತ್ತು ತಂಡದವರನ್ನು ಪಶ್ಚಿಮ ಜರ್ಮನಿಗೆ ಕರೆದುಕೊಂಡುಹೋಗಿದ್ದೆ ಶ್ರೀ ಕೆ. ವಿರೂಪಾಕ್ಷಗೌಡರು ಮತ್ತು ಬಳ್ಳಾರಿ ಜಿಲ್ಲೆ ಕಂಡ ಸೌಜನ್ಯಶೀಲ ಕವಿ, ಅನುವಾದಕ ಶ್ರೀ ಗುರುಮೂರ್ತಿ ಪೆಂಡಕೂರರು.

ಶರವೇಗದಲ್ಲಿ ಬೆಳೆಯುತ್ತಿರುವ ನಗರೀಕರಣದಿಂದಾಗಿ ತೊಗಲು ಬೊಂಬೆಯಾಟವನ್ನು ಕೇಳುವವರು ಇಲ್ಲವಾದಾಗ ಬೇಸತ್ತ ದೊಡ್ಡ ಭರಮಪ್ಪ, ಬೊಂಬೆಗಳನ್ನು ಬಿಟ್ಟು ನೇಗಿಲು ಹಿಡಿದರು. ಅಂದಾಜು 20 ವರ್ಷಗಳ ಕಾಲ ಧೂಳುತಿನ್ನುತ್ತ ಬಿದ್ದಿದ್ದ ತೊಗಲುಬೊಂಬೆಗಳಿಗೆ ಮತ್ತೆ ಜೀವ ತುಂಬಲು ಒತ್ತಾಯಿಸಿದ್ದು, ಅಂದಿನ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಜಿ. ನಾರಾಯಣರು ಹಳ್ಳಿಗಳಲ್ಲಿ ಪುನಾರಂಭಗೊಂಡ ಇದರ ಪ್ರದರ್ಶನವನ್ನು ನಗರಕ್ಕೆ ತಂದು ವಿನಾಶದ ಅಂಚಿನಲ್ಲಿದ್ದ ಈ ಜನಪದ ಕಲೆಯನ್ನು ಜರ್ಮನಿವರೆಗೆ ಕೊಂಡೊಯ್ದು ಪುನರ್ಜನ್ಮ ನೀಡಿದ್ದು ಕೆ. ವಿರೂಪಾಕ್ಷ ಗೌಡರು. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ್ದು ಗುರುಮೂರ್ತಿ ಪೆಂಡಕೂರು.

## ಜರ್ಮನಿ ಪ್ರವಾಸ

ತಮ್ಮ ಜೀವನದುದ್ದಕ್ಕೂ ಜಾನಪದ ಕ್ಷೇತ್ರದಲ್ಲಿ ದುಡಿಯುತ್ತಾ ಬಂದ ಕೆ. ವಿರೂಪಾಕ್ಷಗೌಡರ ಜೀವನದ ಮೈಲುಗಲ್ಲಾಗಿದ್ದು ಅವರು ಕೈಗೊಂಡ ಜರ್ಮನಿ ಪ್ರವಾಸ. ಯಡ್ರಾಮನ ಹಳ್ಳಿಯ ಕಿಳ್ಳೇಕ್ಯಾತರ ದೊಡ್ಡಭರಮಪ್ಪ ಮತ್ತು ತಂಡದವರ ಮುಖಂಡತ್ವ ವಹಿಸಿ, ಗುರುಮೂರ್ತಿ ಪೆಂಡಕೂರರ ಸಹಭಾಗಿತ್ವದಲ್ಲಿ ಇವರ ಚೈತ್ರಯಾತ್ರೆ ನಡೆಯಿತು. 1986ರ ಮೇ ತಿಂಗಳಲ್ಲಿ ಪಶ್ಚಿಮ ಜರ್ಮನಿಯಲ್ಲಿ ನಡೆದಿದ್ದ 'ಅಂತರ್ರಾಷ್ಟ್ರೀಯ

ಗೊಂಬೆ ಉತ್ಸವ'ದಲ್ಲಿ ಈ ತಂಡ ಭಾಗವಹಿಸಿತ್ತು. ಕೆ. ಎಲ್ಲಪ್ಪ, ಕೆ. ನಿಂಗಪ್ಪ, ಕೆ. ದೇವೇಂದ್ರಪ್ಪ ಈ ತಂಡದ ಸದಸ್ಯರು.

ಸುಮಾರು 16 ದಿವಸಗಳ ಕಾಲ ಪಶ್ಚಿಮ ಜರ್ಮನಿಯ ಬೋಖುಂ, ಬರ್ಲಿನ್, ಹ್ಯಾನೋವರ್, ಸ್ಟುಟ್‌ಗಾರ್ಟ್ ಮತ್ತು ಹೈಡಲ್‌ಬರ್ಗ್ ನಗರಗಳಲ್ಲಿ ತೊಗಲು ಬೊಂಬೆಯಾಟದ ಪ್ರದರ್ಶನ ನೀಡಿದ ಗೌಡರ ನೇತೃತ್ವದ ಈ ತಂಡ ಮೊದಲು ಬಂದಿಳಿದುಕೊಂಡಿದ್ದು ಫ್ರಾಂಕ್‌ಫರ್ಟ್ ನಗರಕ್ಕೆ. ಅಲ್ಲಿ ಇವರನ್ನು ಬೋಖುಂನ ಜರ್ಮನಿ ಗೊಂಬೆಯಾಟ ಸಂಸ್ಥೆಯ ನಿರ್ದೇಶಕರಾದ ಡಾ॥ ಕ್ಲಂಡರ್ ಹೃದಯಪೂರ್ವಕವಾಗಿ ಸ್ವಾಗತಿಸಿದ್ದರು. ದಿನಾಂಕ 2–5–96ರಂದು ಅಲ್ಲಿನ ಮ್ಯೂಸಿಯಂನಲ್ಲಿ ಅಂತರಾಷ್ಟ್ರೀಯ ಗೊಂಬೆ ಉತ್ಸವ ಆರಂಭವಾಯಿತು. ಆದ್ಯ ಪ್ರದರ್ಶನವಾಗಿ ಕೆ. ವಿರೂಪಾಕ್ಷಗೌಡರ ನೇತೃತ್ವದ ಈ ತಂಡಕ್ಕೆ ಸಂಜೆ 6 ಗಂಟೆಗೆ ಪ್ರದರ್ಶನಾವಕಾಶ ದೊರೆಯಿತು. ಪ್ರದರ್ಶನಕ್ಕಿಂತ ಮುಂಚೆ ಡಾ॥ ಕ್ಲಂಡರ್‌ರವರು ಭಾರತೀಯ ಜನಪದ ಕಲೆಗಳಲ್ಲೊಂದಾದ ಅದರಲ್ಲೂ ಕನ್ನಡನಾಡಿನ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಯಡ್ರಾಮನಹಳ್ಳಿಯ 'ತೊಗಲು ಬೊಂಬೆಯಾಟ' ಕಲೆಯ ಮಹತ್ವವನ್ನು ಜರ್ಮನಿಗರಿಗೆ ವಿವರಿಸಿದ್ದರಲ್ಲದೇ ತಂಡದ ಎಲ್ಲ ಸದಸ್ಯರನ್ನೂ ಪರಿಚಯಿಸಿಕೊಟ್ಟಿದ್ದರು.

ಅನಂತರ ಆರಂಭವಾಯ್ತು ಕಿಳ್ಳೇಕ್ಯಾತರ ಆಟ. ಸರಿಯಾಗಿ ಒಂದು ಗಂಟೆ ಪ್ರದರ್ಶನ. ಕೆ. ದೊಡ್ಡಭರಮ್ಮ ಮತ್ತು ಸಹಕಲಾವಿದರು ಅಂದು ಪ್ರದರ್ಶಿಸಿದ್ದು 'ಸೀತಾ ಸ್ವಯಂವರ ಕಥಾಭಾಗ'. ಭರಮಪ್ಪನವರ ಕೈಚಳಕ, ವಿಭಿನ್ನವಾದ ರಂಗವಿನ್ಯಾಸ, ಮೋಹಕವಾಗಿತ್ತು. ಗೊಂಬೆ ಹಿಡಿದು ಆಟಕ್ಕೆ ಕುಳಿತಾಗ ಕಥಾಪ್ರಸಂಗವೇ ಅವರಿಗೆ ಉಸಿರಾಗಿತ್ತು. ಸಹಕಲಾವಿದರ ಹಿಮ್ಮೇಳ ಪ್ರದರ್ಶನಕ್ಕೆ ಜೀವಕಳೆ ತಂದಿತ್ತು. ಭಾರತೀಯ ಭಾಷೆಗಳೇ ಗೊತ್ತಿಲ್ಲದ ಜರ್ಮನಿಗರಿಗೆ ಬಳ್ಳಾರಿಯ ಗಂಡು ಮೆಟ್ಟಿನ ಧ್ವನಿ ಕನ್ನಡ

ಅರ್ಥವಾಗಿರಲಿಲ್ಲವಾದರೂ ಪ್ರದರ್ಶನ ವೈಖರಿಯಿಂದ ಅವರು ಸಂತುಷ್ಟರಾಗಿದ್ದರು ಎಂಬುದಕ್ಕೆ ಆಟದ ಮುಕ್ತಾಯವಾಗಿ ತಕ್ಷಣ ಪ್ರೇಕ್ಷಕರ ಕರತಾಡನವೇ ಸಾಕ್ಷಿಯಾಗಿತ್ತು. ಇದಕ್ಕೂ ಮುನ್ನ ಜರ್ಮನ್ ಭಾಷೆಯಲ್ಲಿ ಕಥಾಭಾಗದ ಮುದ್ರಿತ ಕರಪತ್ರಗಳು ಎಲ್ಲರಿಗೂ ವಿತರಣೆಯಾಗಿದ್ದರಿಂದ ಕೊಂಚ ಅನುಕೂಲವೇ ಆಗಿತ್ತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ 'ಬಾನ್' ನಗರದ ಭಾರತೀಯ ಸಂಸ್ಕೃತಿ ಕೇಂದ್ರದ ನಿರ್ದೇಶಕಿ ಶ್ರೀಮತಿ ಉಷಾ ಮಲ್ಲಿಕ್, ಕಲೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಸ್ಥಳೀಯ ಪತ್ರಿಕೆಗಳ ಪ್ರತಿನಿಧಿಗಳ 'ತೊಗಲು ಬೊಂಬೆಯಾಟ'ದತ್ತ ಆಕರ್ಷಿತರಾಗಿದ್ದರು. ಈ ಬಗ್ಗೆ ವಿಶೇಷ ಆಸಕ್ತಿ ತೋರಿಸಿ ತಂತಮ್ಮ ಪತ್ರಿಕೆಗಳಲ್ಲಿ ಚಿತ್ರಸಹಿತ ವಿಸ್ತಾರವಾದ ವರದಿಯನ್ನು ಪ್ರಕಟಿಸಿದ್ದರು. ಇದು ಭಾರತೀಯ ಜನಪದ ಕಲೆಗೆ ವಿದೇಶಿಗರಿಂದ ದೊರೆತ ಪುರಸ್ಕಾರವಾಗಿತ್ತು.

ದಿನಾಂಕ 5-5-86ರಂದು ಕಲೋನ್ ನಗರದ ಹತ್ತಿರವಿರುವ 'ಹೆಗ್ಸ್ಯೋಗನ್‌ಹರ್ತ್' ಪಟ್ಟಣದಲ್ಲಿ 'ಬೋರ್ಗ್' ಅರಮನೆಯಲ್ಲಿ ನಡೆದದ್ದು ಎರಡನೇ ಪ್ರದರ್ಶನ. ಪ್ಯಾರಿಸ್‌ನಿಂದ ಬಂದಿದ್ದ ಗೊಂಬೆಯಾಟದ ಬಗ್ಗೆ ವಿಶೇಷ ಅಧ್ಯಯನ ಮಾಡಿದ ಮೇಡಂ ಮೇರಿಪಾಲ್ ಬೋನಿ ಉಪಸ್ಥಿತಿ ಈ ಪ್ರದರ್ಶನಕ್ಕೆ ಹೆಚ್ಚುಗೆಯನ್ನು ತಂದುಕೊಟ್ಟಿತ್ತು. ಸ್ಮಿಟ್ಸ್ ಕಂಪನಿಯ ಉದ್ಯೋಗಪತಿ ಶ್ರೀಮತಿ ಸ್ಮಿಟ್ಸ್, ಎಷ್ಟರಮಟ್ಟಿಗೆ ಗೊಂಬೆಯಾಟದಿಂದ ಸಂತೋಷಗೊಂಡಿದ್ದರೆಂದರೆ, ಅಂದಿನ ರಾತ್ರಿ ಈ ಕಲಾವಿದರಿಗಾಗಿಯೇ ಭೋಜನಕೂಟ ಏರ್ಪಡಿಸಿದ್ದರು.

ದಿನಾಂಕ 7-5-86ರಂದು ಸ್ಟುಟ್‌ಗಾರ್ಟ್‌ನ ಲಿಂಡೆನ್ ಮ್ಯೂಸಿಯಂನಲ್ಲಿ ಪ್ರದರ್ಶನ ನಡೆಯಿತು. ಗೊಂಬೆಯಾಟಗಳ ಬಗ್ಗೆ ವಿಶೇಷ ಅಧ್ಯಯನ ಮಾಡಿದ ಮತ್ತು ಭಾರತೀಯ ಗೊಂಬೆಯಾಟಗಳ ಬಗ್ಗೆ ಅನೇಕ ಪುಸ್ತಕಗನ್ನು ಬರೆದಿರುವ ಖ್ಯಾತ ವಿದ್ವಾಂಸರಾದ ಡಾ॥

ಷೆಲ್ಪ್‌ಮನ್‌ರವರು ತಂಡದ ಬಗ್ಗೆ ಸಭಿಕರಿಗೆ ಪರಿಚಯಿಸಿಕೊಡುವಾಗ ತಾವು ಭಾರತದಲ್ಲಿ ಪ್ರವಾಸ ಕೈಗೊಂಡಾಗ ಕರ್ನಾಟಕಕ್ಕೆ ಬಂದಿದ್ದು, ಅದರಲ್ಲೂ ಬಳ್ಳಾರಿ ಜಿಲ್ಲೆಯ ಬಾಚಿಗೊಂಡನಹಳ್ಳಿಗೆ ಬಂದಿದ್ದು, ಆಗ ಇಲ್ಲಿನ ಜನಪದ ಪೂಜಾರಿ ಕೆ. ವಿರೂಪಾಕ್ಷಗೌಡರು ನೀಡಿದ ಆದರ–ಅತಿಥ್ಯ ಮತ್ತು ಇಲ್ಲಿನ ಜನಪದ ಕಲೆಗಳ ಬಗ್ಗೆ ಒದಗಿಸಿದ ಸವಿಸ್ತಾರವಾದ ಮಾಹಿತಿಯ ಬಗ್ಗೆ ಸ್ಮರಿಸಿಕೊಂಡಿದ್ದರು (ಈ ಬಗ್ಗೆ ಗುರುಗಳಾದ ಕೆ. ವಿರೂಪಾಕ್ಷಗೌಡರು ಗಂಗಾವತಿ ತಾಲೂಕಿನ ಸಂಗಾಪುರ ಗ್ರಾಮದಲ್ಲಿದ್ದಾಗ, ಅವರ ಭೇಟಿಗೆಂದು ನಾನವರ ಬಳಿ ಹೋಗಿದ್ದ ಸಂದರ್ಭದಲ್ಲಿ ಹೇಳಿದ್ದರು). ಹಳ್ಳಿಗಾಡಿನ ಜನಪದ ಕಲೆಯ ಕೈಂಕರ್ಯ ವಹಿಸಿದ ಗೌಡರ ಸೇವೆಗೆ ವಿದೇಶಿ ನೆಲದಲ್ಲಿ ವಿದೇಶಿ ವಿದ್ವಾಂಸರಿಂದ ಶ್ಲಾಘನೆಯ ಮಾತುಗಳು ಉಡುಗೊರೆಯಾಗಿಯೇ ಕೇಳಿ ಬಂದಿದ್ದವೆಂದು ತಿಳಿದುಕೊಳ್ಳಬೇಕಾಗುತ್ತದೆ. ಆದರೆ ಈ ಬಗ್ಗೆ ಗೌಡರಿಗೆ ಎಂದಿಗೂ ಅಹಂಭಾವ ಇರಲಿಲ್ಲ. ಯಡ್ರಾಮನ ಹಳ್ಳಿಯ ಕಿಳ್ಳೇಕ್ಯಾತರ ದೊಡ್ಡಭರಮಪ್ಪನವರೇ ಶ್ಲಾಘನೆಗೆ ಅರ್ಹರು. ನನ್ನ ನಾಯಕತ್ವ ನೆಪಮಾತ್ರ ಎಂದು ತಮ್ಮ ಆಪ್ತವಲಯದಲ್ಲಿ ಅವರು ಹೇಳಿಕೊಂಡಿದ್ದೂ ಉಂಟು. ಇಂಥವರನ್ನು ನೋಡಿಯೇ ಇರಬೇಕು 'ತುಂಬಿದ ಕೊಡ ತುಳುಕುವುದಿಲ್ಲ' ಎಂಬ ಗಾದೆ ಮಾತು ಹುಟ್ಟಿದ್ದು. ತಮ್ಮ ವಿವರಣೆ ಮುಂದುವರೆಸಿದ್ದ ಡಾ॥ ಷೆಲ್ಪ್‌ರು 'ಕರ್ನಾಟಕದ ತೊಗಲು ಬೊಂಬೆಯಾಟ'ಗಳು ಎಂಬ ಪುಸ್ತಕದ ಮೊದಲ ಅಧ್ಯಾಯ ದೊಡ್ಡ ಭರಮಪ್ಪನವರದ್ದಾಗಿದೆ ಎಂದಿದ್ದರೆಂದು ಗೌಡರು ಸ್ಮರಿಸಿ, ರೋಮಾಂಚನಗೊಳ್ಳುತ್ತಾರೆ.

ದಿನಾಂಕ 10–5–86ರಂದು ಪಶ್ಚಿಮ ಬರ್ಲಿನ್‌ನ ಸ್ಟಾಟಲ್ ಮ್ಯೂಜಿಯಂ ಸಭಾಂಗಣದಲ್ಲಿ 2 ದಿನಗಳ ಕಾಲ ಈ ತಂಡವು ಪ್ರದರ್ಶನ ನೀಡಿತ್ತು. ಈ ಹಿಂದೆಯೇ ಬಾಚಿಗೊಂಡನಹಳ್ಳಿಗೆ ಬಂದಿದ್ದ ತಮ್ಮ ಶಿಷ್ಯರ ಜೊತೆ ಉಪಸ್ಥಿತರಿದ್ದ ಬರ್ಲಿನ್‌ನ ಟ್ರ ಯೂನಿವರ್ಸಿಟಿ ಆಫ್

ಮ್ಯೂಜಿಕಾಲಾಜಿಯ ಮುಖ್ಯಸ್ಥರಾದ ಡಾ॥ ಕುಕಡ್ಸ್ ದಂಪತಿಗಳು ಈ ತಂಡದ ಗೀತೆಗಳ ಧಾಟಿ ಮತ್ತು ಮಟ್ಟುಗಳನ್ನು ಕೇಳಿ ಆನಂದಿಸಿದ ಬಳಿಕ ಪ್ರತಿಕ್ರಿಯಿಸಿ 'ಇಂತಹ ಧಾಟಿಗಳಿರುವುದರಿಂದಲೇ ಶಾಸ್ತ್ರೀಯ ಸಂಗೀತ ಹಾಗೂ ನೃತ್ಯದ ಕಾರ್ಯಕ್ರಮಗಳನ್ನು ನಾನು ನೋಡಿದ್ದು' ಎಂದಿದ್ದರು. ಮುಂದಿನ ಪ್ರಯೋಗವಾಗಿದ್ದು ದಿನಾಂಕ 13-5-86ರಂದು ಹ್ಯಾನೋವರ್‌ನ ಜುರ್ಗಡ್ ಭವನದಲ್ಲಿ. ಇಂಡೋಜರ್ಮನ್ ಸೊಸೈಟಿಯ ಶ್ರೀಮತಿ ಪ್ರಾ. ಜೋಯೇ ಆತಿಥೇಯರ ಅಗರಬತ್ತಿಯಿಂದ ಹಿಡಿದು ಸಂಗೀತದವರೆಗೆ ಈ ನೆಲದ ಸೊಗಡನ್ನು ಬಳಸಿ ಭಾರತೀಯ ವಾತಾವರಣ ನಿರ್ಮಿಸಲಾಗಿತ್ತು. ಜರ್ಮನಿಯಲ್ಲೇ ವಾಸವಾಗಿದ್ದ ಕನ್ನಡಿಗರು ಈ ಕಾರ್ಯಕ್ರಮದ ವೀಕ್ಷಕರಾಗಿ ಬಂದಿದ್ದು ಕಲಾವಿದರ ಖುಷಿಯನ್ನು ಇಮ್ಮಡಿಳಿಸಿತ್ತು. ಸುಮಾರು 75 ನಿಮಿಷಗಳ ಕಾಲ ಪ್ರದರ್ಶನ ನಡೆಯಿತು. ಈ ತಂಡದ ಕೊನೆಯ ಪ್ರದರ್ಶನ ನಡೆದದ್ದು 14-5-86ರಂದು, ಹೈಡಲ್‌ಬರ್ಗ್‌ನ ಥೇಟರ್‌ಸಾಲ್ ಟ್ರಪ್ಲೆಕ್ಸ್‌ನಲ್ಲಿ. 75 ನಿಮಿಷಗಳ ಕಾಲ ನಡೆದ ಪ್ರದರ್ಶನಕ್ಕೆ ಸುಮಾರು 200ಕ್ಕೂ ಅಧಿಕ ಸುಸಂಸ್ಕೃತ ವಿದ್ವಾಂಸ, ವಿವಿಧ ಉನ್ನತ ಹುದ್ದೆಗಳನ್ನಲಂಕರಿಸಿದ ಮಹಾನುಭಾವರು ಸಾಕ್ಷಿಯಾದರು. ಇದಾದ ನಂತರ ಕೆ. ವಿರೂಪಾಕ್ಷಗೌಡರು ಕಲಾವಿದರ ತಂಡವನ್ನು ಮರಳಿ ಸ್ವದೇಶಕ್ಕೆ ಕರೆತಂದರು.

ಸಾಧನೆಯ ಹಾದಿಯಲ್ಲಿರುವ ಕವಿ-ಕಲಾವಿದ ಒಂದು ದಿನ ಉತ್ತುಂಗಕ್ಕೆ ಏರುತ್ತಾನೆಂಬ ಮಾತಿದೆ. ಇದು ಕೆ. ವಿರೂಪಾಕ್ಷಗೌಡರಿಗೆ ಅನ್ವಯಿಸಿ ಹೇಳುವುದಾದರೆ ಜರ್ಮನಿ ಪ್ರವಾಸ ಅವರ ಜಾನಪದ ಚೈತ್ರಯಾತ್ರೆಯ ಶೃಂಗಬಿಂದುವೇ ಸರಿ. ಪಶ್ಚಿಮ ಜರ್ಮನಿಯ ಎಲ್ಲ ನಗರಗಳಲ್ಲೂ 'ತೊಗಲು ಬೊಂಬೆಯಾಟ' ಪ್ರದರ್ಶನ ನೀಡಿದ್ದು ಕೆ. ದೊಡ್ಡಭರಮಪ್ಪ ಮತ್ತು ತಂಡದವರೇ ಆದರೂ ಇಂಗ್ಲೀಷ್ ಬಾರದ ಆ ಕಲಾವಿದರನ್ನು ಸುರಕ್ಷಿತವಾಗಿ ಕರೆದುಕೊಂಡು ಹೋಗಿ ಅಪಾರ ಕೀರ್ತಿ,

ಅಭಿಮಾನದೊಂದಿರೆ ಕರೆತಂದದ್ದು ಮಾತ್ರ ಕೆ. ವಿರೂಪಾಕ್ಷಗೌಡರು ಮತ್ತವರ ಆಪ್ತಸ್ನೇಹಿತೆ, ಬಳ್ಳಾರಿ ಜಿಲ್ಲೆ ಮತ್ತೊಬ್ಬ ಹೆಮ್ಮೆಯ ಕವಿ ಗುರುಮೂರ್ತಿ ಪೆಂಡಕೂರು. ಪ್ರತಿಯೊಂದು ಪ್ರದರ್ಶನದಲ್ಲಿ ತಮ್ಮ ನಪದ ಕಲೆಯನ್ನು ಮೆರೆದು ಎಲ್ಲ ವಿದೇಶಿಯರ ಪ್ರಶಂಸೆಗೆ ಪಾತ್ರರಾಗಿದ್ದು ಕೆ. ದೊಡ್ಡಭರಮಪ್ಪ. ಆದರೆ ಪ್ರತಿ ಪ್ರದರ್ಶನ Man of the match ಭರಮಪ್ಪರಾದರೆ ಆಟವಾಡದೆಯೆ Man of the Series ಆಗಿದ್ದು ತಂಡದ ನಾಯಕ ಕೆ. ವಿರೂಪಾಕ್ಷ ಗೌಡರು. ಯುದ್ಧಮಾಡುವುದು ಸೈನಿಕರೇ ಆದರೂ ಜಯದ ಕೀರ್ತಿ ರಾಜನಿಗೆ ಸಲ್ಲುವಂತೆ ಎಲ್ಲ ಕಲಾವಿದರಲ್ಲೂ ಆತ್ಮಸ್ಥೈರ್ಯ ತುಂಬಿ ವಿದೇಶಿ ನೆಲದಲ್ಲಿ ಸ್ವದೇಶಿ ಕಲೆಯ ಬಿತ್ತರಿಸಿ, ಜಗತ್ತಿನ ಅತ್ಯಂತ ಸುಸಂಸ್ಕೃತರ ಹೃದಯ ಗೆದ್ದ ಈ ಜನಪದ ಗಾರುಡಿಗರ ಯಶೋಗಾಥೆ ಪ್ರಶಂಸನಾರ್ಹವೇ ಸರಿ.

## ಹೃದಯ ಗೆಲ್ಲುವ ಗುಣ

ಸ್ವತಃ ಹೃದಯವಂತರಾಗಿದ್ದ ಕೆ. ವಿರೂಪಾಕ್ಷಗೌಡರು ತಮ್ಮ ಒಡನಾಟಕ್ಕೆ ಬಂದವರೆಲ್ಲರ ಹೃದಯ ಗೆಲ್ಲುವ ಗುಣವನ್ನು ಪಡೆದವರಾಗಿದ್ದರು. ತೆರೆದ ಮನಸ್ಸು, ವಿಶಾಲ ಹೃದಯ, ನೇರ ನುಡಿ, ಸ್ಪಷ್ಟ ನಿರ್ಧಾರ, ಆಡಿದ ಮಾತನ್ನು ಮಾಡಿದ ಮೇಲೆಯೇ ಸ್ಮರಿಸುವ ಗುಣ, ಹಿಡಿದ ಕೆಲಸವನ್ನು ಪೂರ್ಣ ಮಾಡುವ ಛಲ, ಬೇಸರಗೊಳ್ಳದೆಯೆ ನಿರಂತರವಾಗಿ ನೀಡುವ ಅತಿಥಿ ಸತ್ಕಾರ ಇವರ ಪ್ರಮುಖ ಲಕ್ಷಣಗಳು. ಗೌಡರ ಪತ್ನಿ ಶ್ರೀಮತಿ ಲಲಿತಮ್ಮನವರು ಕೂಡ ಹಾಗೆ. ಯಾವಾಗಲೂ ವಾತ್ಸಲ್ಯ ಭರಿತ ಮಾತುಗಳು, ಕಣ್ಣಿನಲ್ಲಿ, ಪುತ್ರ ಪ್ರೇಮ, ಗೌಡರ ಪ್ರತಿಯೊಂದು ಕೆಲಸಕ್ಕೂ ಪೂರ್ಣ ಸಹಕಾರ ನೀಡುವ ದೊಡ್ಡ ಮನಸ್ಸು. ಯಾವಾಗಲೂ ಸೆರಗು ಹೊದ್ದ, ಹುಣ್ಣಿಮೆಯ ಚಂದಿರನಂತಿರುವ ದುಂಡು ಮುಖ, ಸಂಜೆಯ ಸೂರ್ಯನನ್ನು ನಾಚಿಸುವ ಇಷ್ಟಗಲದ ಕೆಂಪು ಕುಂಕುಮ, ಅದರ ಹಿಂದೆಯೇ ತೆಳುವಾಗಿ ಹಣೆಯಗಲಕ್ಕೂ ಹರಡಿಕೊಂಡಿರುವ

ವಿಭೂತಿ, ಹಸನ್ಮುಖಿ, ಎಲ್ಲರ 'ಹೊಟ್ಟೆ–ನೆತ್ತಿ' ಕಾಳಜಿ ಮಾಡುವ ದೊಡ್ಡ ಮನಸ್ಸು ಈ ದೇವತೆಯ ಪ್ರಮುಖ ಲಕ್ಷಣಗಳು. ಸಾಕ್ಷಾತ್ ಕನ್ನಡಾಂಬೆಯೇ ಕನ್ನಡ ನೆಲದ ಗರತಿಯಾಗಿ ಮೈದಳೆದು ನಿಂತಂತೆ ಭಾಸವಾಗುತ್ತದೆ. ಗೌಡರು ಮತ್ತು ಶ್ರೀಮತಿ ಲಲಿತಮ್ಮ ಪಾಯಸ ಮತ್ತು ತುಪ್ಪದಂತೆ ಬೆರೆತಿದ್ದಾರೆಂದರೆ ಅತಿಶಯೋಕ್ತಿಯೇನಲ್ಲ. ಇಂಥವರ ಒಡನಾಟ ಸಿಕ್ಕಿರುವುದೇ ಪುಣ್ಯ.

ಗೌಡರ ಸ್ವಭಾವ, ಗುಣ, ಆತಿಥ್ಯಗಳಿಂದ ಕೆಲವರ ಮನ ಗೆದ್ದರೆ, ತಮ್ಮ ಜನಪದ ಸಾಹಿತ್ಯ ಮತ್ತಿತರ ಸಾಹಿತ್ಯದ ಸಂಗ್ರಹ ಮತ್ತು ಮುದ್ರಣ ಕಾರ್ಯದಿಂದ ನಾಡಿನ ಹಿರಿಯ ಚೇತನಗಳ ಮೆಚ್ಚುಗೆಯನ್ನು ಗಳಿಸಿದ್ದಾರೆ. ಇವರು ಸಂಪಾದಿಸಿದ 'ನೈವೇದ್ಯ' (1969) ಕೃತಿಯನ್ನು ಮೆಚ್ಚಿ ಪ್ರೊ. ವಿ. ಕೃ. ಗೋಕಾಕ, ಡಾ|| ಹಾ. ಮಾ. ನಾಯಕ, ಗೊ. ರು. ಚನ್ನಬಸಪ್ಪ, ಎಚ್. ಎಲ್. ನಾಗೇಗೌಡ, ಹಂಪ ನಾಗರಾಜಯ್ಯ, ಕೆ. ವಿ. ಸುಬ್ಬಣ್ಣ ಹೆಗ್ಗೋಡು, ಡಾ|| ಹೆಚ್. ತಿಪ್ಪೇರುರಸ್ವಾಮಿ ಮೊದಲಾದ ಅತಿರಥರು ಪ್ರಶಂಸೆಮಾಡಿದ್ದಾರೆ. ಗೌಡರಂಥ ಜನಪದ ಸಾಹಿತ್ಯದಾಹಿ ಬಳ್ಳಾರಿ ಜಿಲ್ಲೆಯಲ್ಲಿರುವ ಬಗ್ಗೆ ಸಂತಸ ವ್ಯಕ್ತಪಡಿಸಿದ್ದಾರೆ.

ನಾಡಿನ ಖ್ಯಾತ ಕಾದಂಬರಿಕಾರ ಕುಂ. ವೀರಭದ್ರಪ್ಪ ಬರೆದ 'ಕೆ. ವಿರೂಪಾಕ್ಷ ಗೌಡರ ವ್ಯಕ್ತಿತ್ವ ಮತ್ತು ಬದುಕು' ಎಂಬ ಶೀರ್ಷಿಕೆಯ ಲೇಖನದಲ್ಲಿ "ಕೆ. ವಿರೂಪಾಕ್ಷಗೌಡರು ತಮ್ಮ ಸಮೃದ್ಧ ವ್ಯಕ್ತಿತ್ವದ ಪ್ರಭಾವದ ವಲಯದಲ್ಲಿ ತಮ್ಮ ಸುತ್ತಮುತ್ತಲಿನ ಎಲ್ಲರನ್ನು ಒಳಗೊಂಡು ಸಾಹಿತ್ಯಿಕವಾಗಿ ಶ್ರಮಿಸುವುದೊಂದೆ ಅಲ್ಲದೆ ಸಮಾಜದ ಪ್ರತಿಯೊಂದು ರಚನಾತ್ಮಕ ಚಟುವಟಿಕೆಗಳಲ್ಲಿ ಪ್ರಾಮಾಣಿಕವಾಗಿ ಪಾಲ್ಗೊಳ್ಳುತ್ತಾರೆ. ಸುದ್ದಿಯಾಗಬಯಸದ ಇಂಥ ವ್ಯಕ್ತಿ, ತಮ್ಮ ಕಿಮ್ಮತ್ತಿನ ಮರ್ಜಿ ಮುಲಾಜಿಗಳನ್ನು ಬಿಟ್ಟುಕೊಟ್ಟು ಒಂದು ಪ್ರಬುದ್ಧ ಸಾಮಾಜಿಕ ಕೇಂದ್ರವಾಗಿರುವುದು ಗೌಡರನ್ನು ಹತ್ತಿರದಿಂದ ಕಂಡವರಿಗೆಲ್ಲ ಗೊತ್ತಾಗುವ ವಿಷಯ. ಈ ವ್ಯಕ್ತಿ ಒಂದು ಸಂಸ್ಥೆಯಾಗಿ

ಕಾರ್ಯ ನಿರ್ವಹಿಸತೊಡಗಿದಂದಿನಿಂದ ಸಾಹಿತ್ಯದ ದೃಷ್ಟಿಯಿಂದ ಹೇಳುವುದಾದರೆ ಬಳ್ಳಾರಿ ಜಿಲ್ಲೆಗೆ ಇನ್ನೊಂದು ಹೆಸರು ಕೆ. ವಿರೂಪಾಕ್ಷಗೌಡರು' ಎಂದು ಬರೆದಿರುವುದು ಇವರ ಸಂಪೂರ್ಣ ವ್ಯಕ್ತಿವ ಮತ್ತು ಘನತೆಯನ್ನು ಬಿಂಬಿಸುತ್ತದೆ.

'ನೋಡಿದ ಕೂಡಲೆ ಪ್ರೀತಿ ಉಕ್ಕುತ್ತದೆ. ಹೃದಯ ಅರಳುತ್ತದೆ. ಕವಿ ಕೆ. ವಿರೂಪಾಕ್ಷಗೌಡರ ಮುಖದ ಕಳೆ ಅಂಥದು. ಬಳ್ಳಾರಿ ಜಿಲ್ಲೆಯ ಮಣ್ಣನ್ನು ಆಳವಾಗಿ ಹೊಕ್ಕಿರುವ ಈ ಕವಿ, ಕೇವಲ ಸಾಹಿತ್ಯ ರಚನೆಯಲ್ಲಿ ತನ್ನ ಕಾಲವನ್ನು ಕಳೆದಿಲ್ಲ. ಹೊಲ ಉತ್ತುವ ಬಿತ್ತುವ ಕೆಲಸ ಎಷ್ಟು ಪ್ರೀತಿಯದೋ ಅಷ್ಟೇ ಪ್ರೀತಿ ಸಾಹಿತ್ಯ ರಚನೆಯಲ್ಲಿ, ಸಾಹಿತ್ಯ ರಚಕರಲ್ಲಿ. ಇವರು ಸಂಪರ್ಕ ಇಟ್ಟುಕೊಳ್ಳದ ಪತ್ರಿಕೆಗಳು ಕಡಿಮೆ, ಸಾಹಿತಿಗಳು ಕಡಿಮೆ. ಯಾವುದೇ ಆಡಂಬರದಲ್ಲಿ ವಾದ–ವಿವಾದಗಳಲ್ಲಿ ಸಾಹಿತ್ಯವನ್ನು ಸಿಲುಕಿಸುವ ಜಾಯಮಾನ ಇವರದಲ್ಲ. ಎಲ್ಲವನ್ನು ಸರಳವಾಗಿ ತುಂಬ ಪ್ರೀತಿಯಿಂದ ಸ್ವೀಕರಿಸುತ್ತಾರೆ' ಎಂದು ಅದೆ ಫೋಲ್ಡರ್‌ನಲ್ಲಿ ಹಗರಿಬೊಮ್ಮನಹಳ್ಳಿಯ ರಾಮನಗರದ ಗುರುಮೂರ್ತಿ ಪೆಂಡಕೂರು ಬರೆದಿರುವುದು ಗೌಡರ ವ್ಯಕ್ತಿತ್ವವನ್ನು ಬಿಚ್ಚಿಡುತ್ತದೆ.

ಇವರ ಸಮಗ್ರ ಕವನ ಸಂಕಲನ 'ಆಕಾಶಮಲ್ಲಿಗೆ' ಸಂಪಾದಕ ಕೊಪ್ಪಳ ಜಿಲ್ಲೆಯ ಅಕ್ಬರ್ ಸಿ. ಕಾಲಿಮಿರ್ಚಿಯವರ ಶಬ್ದಗಳಲ್ಲಿ ಹೇಳುವುದಾದರೆ 'ತನು ಮನ ಧನವನ್ನೆಲ್ಲ ಸಮಾಜಕ್ಕೆ ಮುಡಿಪಿಟ್ಟು, ಬದುಕು ಸವೆದರೂ ಎದೆಗುಂದದ ಸ್ವಭಾವ ಕೆ. ವಿರೂಪಾಕ್ಷಗೌಡರದು' (ಸುಧಾ ಪತ್ರಿಕೆ 26, ಆಗಸ್ಟ್ 1999) ಅಂತಹ ತ್ಯಾಗವನ್ನು ಸಾಹಿತ್ಯಕ್ಕಾಗಿ ಮಾಡಿದ್ದಾರೆ.

'ಬಳ್ಳಾರಿ ಜಿಲ್ಲೆಯ ಅಗ್ರಗಣ್ಯ ಕವಿ ಕೆ. ವಿರೂಪಾಕ್ಷಗೌಡರು ಮಧುರವಾದ ಭಾವನೆಗಳನ್ನು ಸೊಗಸಾಗಿ ಹೆಣೆಯಬಲ್ಲರು. ಬಯಲುಸೀಮೆಯ ಹಳ್ಳಿಯ ಮಣ್ಣಿನ ಸತ್ವವನ್ನುಂಡು ಬೆಳೆದ ಈ ಕವಿಯ

ಕವನಗಳು ಸಹಜವಾಗಿ ಅರಳಿಕೊಳ್ಳುತ್ತವೆ. ಭಾವಕ್ಕೆ ತಕ್ಕ ಭಾಷೆ, ಭಾಷೆಗ ತಕ್ಕ ಶೈಲಿ, ಗೌಡರಿಗೆ ಸಿದ್ಧಿಸಿವೆ' ಎಂದು 'ಚೇತನ' ಕವನ ಸಂಗ್ರಹದ ಪ್ರಸ್ತಾವನೆಯಲ್ಲಿ ಸಾಹಿತ್ಯಾನಂದರು ಬರೆದಿರುವುದು ಗೌಡರ ಸಾಹಿತ್ಯದ ಸತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

ಹೀಗೆ ವಿರೂಪಾಕ್ಷಗೌಡರನ್ನು ಹತ್ತಿರದಿಂದ ಕಂಡ ಹಿರಿ-ಕಿರಿಯರೆಲ್ಲರೂ ಇವರ ಒಳ್ಳೆಯತನಕ್ಕೆ ಮಾರುಹೋಗಿದ್ದಾರೆ. ಕವಿತ್ವವನ್ನು ಮೆಚ್ಚಿದ್ದಾರೆ. ಹೃದಯವಂತಿಕೆಗೆ ತಲೆಬಾಗಿದ್ದಾರೆ. ಜನಪದ ಸಾಹಿತ್ಯ ಸಂಗ್ರಹ ಮತ್ತು ಮುದ್ರಣ ಸಾಹಸ ಕಂಡು ಅಚ್ಚರಿವ್ಯಕ್ತಪಡಿಸಿದ್ದಾರೆ. ಎಷ್ಟೋ ಜನ ಸಮವಯಸ್ಕರು ಮತ್ತು ಕಿರಿ ವಯಸ್ಕರು ಇವರನ್ನು ಗುರುಗಳೆಂದು ಮನಸಾರೆ ಒಪ್ಪಿಕೊಂಡಿದ್ದಾರೆ. ಈ ಎಲ್ಲಾ ಹೇಳಿಕೆ, ಹೊಗಳಿಕೆಗಳನ್ನು ಬಳ್ಳಾರಿ ಜಿಲ್ಲೆಯಲ್ಲಿ ಜನಪದ ಸಾಹಿತ್ಯ ಸಂಗ್ರಹ-ಮುದ್ರಣ ಕಾರ್ಯವನ್ನು ಗಮನದಲ್ಲಿಟ್ಟುಕೊಂಡು ಕೆ. ವಿರೂಪಾಕ್ಷಗೌಡರನ್ನು 'ಬಳ್ಳಾರಿ ಜಿಲ್ಲಾ ಜನಪದ ಸಾಹಿತ್ಯ ಪಿತಾಮಹ' ಎಂದು ಕಂಡರೆ ತಪ್ಪಾಗದು.

**ದುಡಿದದ್ದು ಅಪಾರ ಪಡೆದದ್ದು ನಶ್ವರ**

ಜನಪದ ಸಾಹಿತ್ಯ ಕ್ಷೇತ್ರಕ್ಕೆ ತಮ್ಮನ್ನು ತಾವು ತೊಡಗಿಸಿಕೊಳ್ಳುವುದರ ಜೊತೆಗೆ ವಿರೂಪಾಕ್ಷಗೌಡರು ಆಡಳಿತಾತ್ಮಕವಾಗಿಯೂ ವಿವಿಧ ಸಂಘ-ಸಂಸ್ಥೆಗಳಲ್ಲಿ ಸಕ್ರಿಯ ಕಾರ್ಯಕರ್ತ ಸ್ಥಾನದಿಂದ ಹಿಡಿದು ಜವಾಬ್ದಾರಿಯುತ ಸ್ಥಾನದವರೆಗೆ ಸೇವೆಸಲ್ಲಿಸಿದ್ದಾರೆ. ಮೈಸೂರಿನ ಜನಪದ ಪರಿಷತ್ತಿನ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ, ಬಳ್ಳಾರಿ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ 1969ರಿಂದ 1978ರವರೆಗೆ 9 ವರ್ಷಗಳ ಕಾಲ ನಿರಂತರವಾಗಿ ದುಡಿದಿದ್ದಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ, 1980-1987ರವರೆಗೂ ಸೇವೆ ಸಲ್ಲಿಸಿದ್ದಾರೆ. 1963 ಆರಂಭಗೊಂಡಿದ್ದ ಹಗರಿಬೊಮ್ಮನಹಳ್ಳಿಯ 'ಜಿಜ್ಞಾಸುಕೂಟ'ಕ್ಕೆ ಬೆಂಬಲಿಗರಾಗಿ, 1998ರಲ್ಲಿ ಗಂಗಾವತಿಯಲ್ಲಿ

ಸ್ಥಾಪಿತವಾಗಿದ್ದ 'ಭಾವ ವಿನಿಮಯ' ಮತ್ತು 'ಶಾರದಾ ಪ್ರಕಾಶನ'ಕ್ಕೆ ಕ್ರಮವಾಗಿ ಗೌರವಾಧ್ಯಕ್ಷರಾಗಿ, ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದರು.

1970ರಲ್ಲಿ ಬಳ್ಳಾರಿಯಲ್ಲಿ ನಡದ ಜಿಲ್ಲಾ ಸಾಹಿತ್ಯ ಸಮ್ಮೇಳನ, 1971ರಲ್ಲಿ ಶಿರಗುಪ್ಪದಲ್ಲಿ ನಡೆದ ಬಳ್ಳಾರಿ ಜಿಲ್ಲಾ ಸಾಹಿತ್ಯ ಸಮ್ಮೇಳನ, 1983ರಲ್ಲಿ ಹಂಪಿಯಲ್ಲಿ ನಡೆದ ಬಳ್ಳಾರಿ ಜಿಲ್ಲಾ ಜಾನಪದ ಕಲಾ ಸಮ್ಮೇಳನ ಮತ್ತು ಪ್ರದರ್ಶನ ಮತ್ತು ಸಮ್ಮೇಳನ ಇವರ ಕಾರ್ಯದಕ್ಷತೆ, ಕಾರ್ಯಕ್ಷಮತೆಯನ್ನು ಬಿಂಬಿಸುತ್ತವೆ.

ತರೀಕೆರೆ, ಮಂಗಳೂರು, ಮಂಡ್ಯದಲ್ಲಿ ಜರುಗಿದ ಜನಪದ ಗೋಷ್ಠಿಗಳಲ್ಲಿ ಭಾಗವಹಿಸಿದ್ದು, ಯುಗಾದಿ ಕವಿ ಸಮ್ಮೇಳನ (ಆಲ್ ಇಂಡಿಯಾ ರೇಡಿಯೋ, ಬೆಂಗಳೂರು), ಗಾಂಧಿ ಶತಾಬ್ಧಿ ಕವಿ ಸಮ್ಮೇಳನ (ಆಕಾಶವಾಣಿ, ಬೆಂಗಳೂರು), ಕವಿ ಸಮ್ಮೇಳನ, ಬಳ್ಳಾರಿ (1971, ಪ್ರಸಾರ ಇಲಾಖೆ), ಕುಟುಂಬ ಯೋಜನೆ ಕವಿ ಸಮ್ಮೇಳನ, ರಾಯಚೂರು (1972) ಇವುಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದು ನೋಡಿದರೆ ಜನಪದ ಸಾಹಿತ್ಯ ಮತ್ತು ಸಾಹಿತ್ಯ ಕ್ಷೇತ್ರಕ್ಕಾಗಿ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡಿದ್ದರೆಂದು ತಿಳಿದುಬರುತ್ತದೆ. 'ಬಳ್ಳಾರಿ ಜಿಲ್ಲಾ ದರ್ಶನ', 'ಜನಪದ ಸಾಹಿತ್ಯ' (ಎಲ್. ಆರ್. ಹೆಗಡೆ), 3ನೇ ತರಗತಿಯ ಸಾಮಾಜಿಕ ಪಾಠಗಳಲ್ಲಿ ಗೌಡರ ಕುರಿತ ಉಲ್ಲೇಖವಿರುವುದು, 'ಬಳ್ಳಾರಿ ಗೆಜೆಟಿಯರ್', 'ಯಾರು ? ಯಾರು ?' (ಗುಲ್ಬರ್ಗಾ ವಿಭಾಗ), 'ಕನ್ನಡ ವಿಶ್ವಕೋಶ' (3, 5ನೇ ಸಂಪುಟ), 'ಪ್ರಸಿದ್ಧ ಏಷ್ಯಾ', 'ಪ್ರಸಿದ್ಧ ಭಾರತ' ಮುಂತಾದ ಕೃತಿ–ಗ್ರಂಥಗಳಲ್ಲಿ ವಿರೂಪಾಕ್ಷಗೌಡರ ಹೆಸರು ಸೂಚಿತವಾಗಿದ್ದು ಅವರ ಹೆಸರು ಜಾಗತಿಕ ಮಟ್ಟದಲ್ಲಿ ಕೇಳಿ ಬಂದಿತ್ತು ಎಂಬುದು ಸ್ಪಷ್ಟವಾಗುತ್ತದೆ. ಓಡಿಸ್ಸಾದಲ್ಲಿ ಭುವನೇಶ್ವರದಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಜಾನಪದ ಮೇಳದಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕಿನ ಡೊಳ್ಳಿನ ಪದ ಕಲಾವಿದರನ್ನು ಕರೆದುಕೊಂಡು ಹೋಗಿದ್ದು, ಪಶ್ಚಿಮ ಜರ್ಮನಿಯಲ್ಲಿ ನಡೆದ

'ಅಂತರ್ರಾಷ್ಟ್ರೀಯ ಗೊಂಬೆಗಳ ಉತ್ಸವ'ದಲ್ಲಿ ಯಡ್ರಾಮಹಳ್ಳಿಯ ಕಿಳ್ಳೇಕ್ಯಾತರ ದೊಡ್ಡಭರಮಪ್ಪನವರ ತಂಡವನ್ನು ಕರೆದುಕೊಂಡು ಹೋಗಿದ್ದು ಇವರ ಘನಕಾರ್ಯಗಳಲ್ಲಿ ಅಸಾಧಾರಣವಾದವುಗಳಾಗಿವೆ.

'ಏನು ಮಾಡಿದರೇನು ? ಭವಹಿಂಗದು ' ಎಂಬ ದಾಸರ ವಾಣಿಯು ಇಲ್ಲಿ ಸ್ವಲ್ಪ ವಿಭಿನ್ನವಾಗಿ ಅರ್ಥೈಸಿಕೊಳ್ಳಬೇಕಾಗುತ್ತದೆ. ಕೆ. ವಿರೂಪಾಕ್ಷಗೌಡರು ಏನು ಮಾಡಿದರೇನು ? ಸರ್ಕಾರದ ಕಣ್ಣು ತೆರೆಯದು? ಎಂದು ಅಂದುಕೊಳ್ಳಬೇಕಾಗುತ್ತದೆ. ಏಕೆಂದರೆ ಇವರು ಮಾಡಿದ ಅವಿರತ ಸೇವೆಯನ್ನು ಕರ್ನಾಟಕ ಸರ್ಕಾರವಾಗಲಿ, ಅಕಾಡೆಮಿಗಳಾಗಲಿ, ಪರಿಷತ್ತುಗಳಾಗಲಿ, ವಿಶ್ವವಿದ್ಯಾಲಯಗಳಾಗಲಿ ಗಮನಿಸಿಲ್ಲವೆಂದು ಕಾಣುತ್ತದೆ. ಇತ್ತೀಚೆಗೆ ರಾಜ್ಯೋತ್ಸವ ಪ್ರಶಸ್ತಿ, ಗೌರವ ಡಾಕ್ಟರೇಟ್ ಪ್ರಶಸ್ತಿ ಮತ್ತಿತರ ಪ್ರಶಸ್ತಿ ಪುರಸ್ಕಾರಗಳನ್ನು ಪಡೆಯುತ್ತಿರುವ ಯುವ ಪ್ರತಿಭೆಗಳನ್ನು ನೋಡಿದರೆ ಇವರಿಗಿಂತ ವಿರೂಪಾಕ್ಷಗೌಡರು ಎತ್ತರ ಸ್ಥಾನದಲ್ಲಿ ನಿಲ್ಲುತ್ತಾರೆ. ರಾಜಕಾರಣಿಗಳಿಗೆ ಗೌರವ ಡಾಕ್ಟರೇಟ್ ಪದವಿ ನೀಡುವ ನಮ್ಮ ನಾಡಿನ ವಿಶ್ವವಿದ್ಯಾಲಯಗಳು ಗೌಡರಂತಹ ನಿಷ್ಕಾಮ ಕರ್ಮಿಗಳನ್ನು ಗಮನಿಸಿದೇ ಇರುವುದು ಅಸಹನೀಯ. ಬಳ್ಳಾರಿ ಜಿಲ್ಲೆಯಲ್ಲೇ ಇರುವ ಹಂಪಿಯ ಕನ್ನಡ ವಿ. ವಿ. ಕೂಡ ಇವರನ್ನು ಗುರುತಿಸದೇ ಇರುವುದು ಅಚ್ಚರಿ ಮೂಡಿಸದೇ ಇರದು. ಸುಮಾರು ವರ್ಷಗಳ ಕಾಲ ಸಾಹಿತ್ಯ, ಜನಪದ ಸಾಹಿತ್ಯ ಸೇವೆ ಸಲ್ಲಿಸಿದ ಗೌಡರಿಗೆ ರಾಜ್ಯೋತ್ಸವ ಪ್ರಶಸ್ತಿಯಾಗಲಿ, ಜಾನಪದ ಅಕಾಡೆಮಿ ಪ್ರಶಸ್ತಿಯಾಗಲಿ ಲಭಿಸಬೇಕಾಗಿತ್ತು. ಯಾರಿಂದ ಏನನ್ನೂ ಬಯಸದ ಇವರು ತಮ್ಮದೆಲ್ಲವನ್ನೂ ಬಳ್ಳಾರಿ ಜಿಲ್ಲೆಯ ಸಾಹಿತ್ಯ, ಸಂಸ್ಕೃತಿ, ಜಾನಪದ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿದ ವಿರೂಪಾಕ್ಷಗೌಡರ 'ಸಂಭಾವನಾ ಗ್ರಂಥ' ಮರಣೋತ್ತರವಾಗಿಯಾದರೂ ಲಭಿಸಲಿ ಎಂಬುದು ಅವರ ಆಪ್ತವಲಯದವರ ಆಶಯ. ಈ ಆಶಯ ನಿರಾಸೆಯಾಗದಿರಲಿ ಎಂಬುದು ನನ್ನ ಕೋರಿಕೆ ಅಷ್ಟೆ.

ಗೌಡರ ಆಪ್ತ ಗೆಳೆಯರಾದ ಗುರುಮೂರ್ತಿ ಪೆಂಡಕೂರು ಅವರ ಪ್ರಯತ್ನದಿಂದ 'ಕೆ. ವಿರೂಪಾಕ್ಷ ಗೌಡ ದತ್ತಿನಿಧಿ'ಯೆಂದು ಈಗಾಗಲೇ ಒಂದು ಲಕ್ಷ ರೂಪಾಯಿ ಸಂಗ್ರಹಸಲಾಗಿದೆ. ಗೌಡರ ನೆನಪು ಸಂಸ್ಕೃತಿ ಚಿಂತಕರ ಮನಸ್ಸಿನಲ್ಲಿ ಸ್ಥಿರವಾಗಿ ನೆಲೆಸುವಂತೆ ವಾರ್ಷಿಕ ಕಾರ್ಯಕ್ರಮ, ಪ್ರಶಸ್ತಿ ನೀಡುವ ಯೋಜನೆ ಆಗುತ್ತಿದೆ.

**ಕಷ್ಟದ ಕೊನೆಯ ದಿನಗಳು**

ತಮ್ಮ ಕೊನೆಯ ದಿನಗಳನ್ನು ಗಂಗಾವತಿ ತಾಲ್ಲೂಕಿನ ಕಾರಟಗಿ ಗ್ರಾಮದಲ್ಲಿ ಎಡರನೇ ಮಗ ಕೆ. ಗಂಗಾಧರಗೌಡರ ಬಳಿ ಕಳೆದರು. ಪತ್ನಿ ಶ್ರೀಮತಿ ಲಲಿತಮ್ಮ, ಪುತ್ರ ಗಂಗಾಧರಗೌಡ, ಸೊಸೆ ಶ್ರೀಮತಿ ಅನ್ನಪೂರ್ಣಮ್ಮನವರ ಜೊತೆಯಲ್ಲಿ ಇಳಿ ವಯಸ್ಸಿನ ದಿನಗಳನ್ನು ಕಳೆಯುವಾಗ ಗೌಡರ ಆರೋಗ್ಯ ಅವರನ್ನು ತುಂಬಾ ಹಿಂಸಿಸಿತು. ರಕ್ತದೊತ್ತಡ ಸಮಸ್ಯೆ, ಮಧುಮೇಹ, ನಿದ್ರಾಹೀನತೆ, ಮೂಳೆ ಮತ್ತು ಕೀಲುನೋವುಗಳು ಗೌಡರನ್ನು ಹಿಂಡಿಹಿಪ್ಪೆ ಮಾಡಿದವು. ಹೆಂಡತಿ–ಮಗ–ಸೊಸೆ ಬೇಕಾದ ಆರೈಕೆಯನ್ನು ಮಾಡಲು ಕಟಿಬದ್ಧರಾಗಿದ್ದರೂ ವೃದ್ಧಾಪ್ಯ ಸಹಜ ಶಾರೀರಿಕ ನೋವುಗು ಇವರ ನೆಮ್ಮದಿಯನ್ನು ಹಾಳು ಮಾಡಿದವು. ಶಾರೀರಿಕ ದೌರ್ಬಲ್ಯಗಳಿಂದಾಗಿ ಮಾನಸಿಕ ಸ್ಥೈರ್ಯ ಕುಸಿದಿದ್ದರಿಂದ ಕೊನೆಯ ಕೆಲ ವರ್ಷಗಳು ಗೌಡರ ಸಿಡುಕಿನ ಸ್ವಭಾವಕ್ಕೆ ಸಾಕ್ಷಿಯಾದವು. ರಕ್ತದೊತ್ತಡ, ಹೃದಯವೇದನೆ ತಡೆಯಲಾಗದೆ ಒಮ್ಮೆ ಅವರಲ್ಲಿ ಆತ್ಮಹತ್ಯೆ ವಿಚಾರ ಸುಳಿದಿತ್ತು ಎಂಬುದು ಕೇಳಿಬಂದಿತ್ತು. ಆದರೆ ಇದೇ ಕಾರಟಗಿಯಲ್ಲಿದ್ದ ಹಿರಿಯ ಮಗ ಕೆ. ಚಂದ್ರಶೇಖರಗೌಡರ ಜೊತೆಯಲ್ಲಿರುವಾಗ ಖಿನ್ನತೆಗೊಳಗಾಗಿ ಆ ಪ್ರಯತ್ನವನ್ನು ಮಾಡಿದ್ದರು. ಕಾರಟಗಿಯಿಂದ ಗಂಗಾವತಿಯ ಡಾ॥ ಚಂದ್ರಪ್ಪನವರ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಲಾಗಿತ್ತು. ಮನೆಮಂದಿಯ ಮತ್ತು ಶಿಷ್ಯವರ್ಗದ ಅದೃಷ್ಟ ಗಟ್ಟಿಯಾಗಿತ್ತು. ನಮ್ಮ ಗುರುಗಳು ಪ್ರಾಣಾಪಾಯದಿಂದ ಪಾರಾಗಿದ್ದರು.

ಸಾಂತ್ವನ ಹೇಳಲೆಂದು ಹೋದ ನನ್ನ ಮುಂದೆ ಶ್ರೀಮತಿ ಲಲಿತಮ್ಮ ಮತ್ತು ಚಂದ್ರಶೇಖರಗೌಡರು ಕಣ್ಣೀರಿಟ್ಟಿದ್ದರು. 'ಈ ಜರ್ಜರಿತವಾದ ದೇಹ ಉಳಿಸಿದರೆ ಏನು ಲಾಭ ?' ಎಂದು ಕೇಳಿದಾಗ 'ನೀವು ನಿಮಗಾಗಿ ಅಲ್ಲ ನಮ್ಮಂಥವರಗೆ ಮಾರ್ಗದರ್ಶನ ಮಾಡಲು ಇನ್ನೂ ಹತ್ತಾರು ವರ್ಷ ಬದುಕಬೇಕು. ಉದ್ವೇಗಕ್ಕೆ ಒಳಗಾಗಿ ಅನಾಹುತಕ್ಕೆ ಕೈಹಾಕಿ ನಮ್ಮಂಥವರನ್ನು ಅನಾಥರನ್ನಾಗಿ ಮಾಡಬೇಡಿ' ಎಂದು ಅಂಗಲಾಚಿ ಬೇಡಿಕೊಂಡಿದ್ದೆ.

ಗಂಗಾವತಿಯಿಂದ ಕೇವಲ 4 ಕಿ.ಮೀ. ದೂರದಲ್ಲಿರುವ ಸಂಗಾಪುರದಲ್ಲಿರುವಾಗ ವಾರಕ್ಕೆರಡು ಮೂರು ಬಾರಿ ಭೇಟಿ ಕೊಡುತ್ತಿದ್ದೆ. ಸಿಹಿ ತಿನಿಸುಗಳನ್ನು ಮಾರುವ ತಳ್ಳುವ ಬಂಡಿಯೊಂದು ಮಗು ನಿಂತಿರುವ ಸ್ಥಳದತ್ತ ಬರುತ್ತಿದ್ದಂತೆಯೇ ಆ ಮಗುವಿನ ಮುಖದಲ್ಲಿ ಸಂತೋಷ ಹೇಗೆ ಅಧಿಕಗೊಳ್ಳುತ್ತದೋ ಹಾಗೆ ನಾನು ಅವರ ಬಳಿ ಬರುವುದನ್ನು ಕಂಡೊಡನೆ ಅವರ ಕಣ್ಣಲ್ಲಿ ಸಂತೋಷ ಉಕ್ಕಿ ಹರಿಯುತ್ತಿತ್ತು. ಗೌಡರಿಗೆ ಬೇಕಾಗಿದ್ದು ದಂಡಿನನೆಂಬ ವ್ಯಕ್ತಿಯಲ್ಲ. ಅವನಲ್ಲಿರುವ ವಿದ್ಯಾರ್ಥಿ. ತಾವು ಎಡೆಬಿಡದೆ ಮಾತನಾಡುವುದನ್ನು ಕಣ್ಣು ಪಿಳಕಿಸದೇ ಕೇಳುವ ಒಬ್ಬ ವಿಷಯದಾಹಿ ಕೇಳುಗ. ಅದು ನನಗೂ ಗೊತ್ತಿತ್ತು. ಗೌಡರ ಮನೆಯವರಿಗೂ ಗೊತ್ತಿತ್ತು. ನಮ್ಮಿಬ್ಬರ ಸಂವಾದವನ್ನು (ಸಂವಾದ ಎನ್ನುವುದಕ್ಕಿಂತ ಅವರು ಹೇಳುತ್ತಿದ್ದರು, ನಾನು 'ಹ್ಞೂಂ' ಎನ್ನುತ್ತಲೇ ಇರುತ್ತಿದ್ದೆ) ನೋಡಿದ ಮಾತೃ ಸ್ವರೂಪಿ ಶ್ರೀಮತಿ ಲಲಿತಮ್ಮನವರು 'ನಂ ಗೌಡ್ರಿಗೆ ಮಾತಾಡುವುದೆಂದರೆ ಬಾಳ ಇಷ್ಟ. ಹೇಳಿದ್ದೇ ಹೇಳಿದ್ದು. ವಿವರಿಸಿದ್ದೇ ವಿವರಿಸಿದ್ದು. ನೀನೊಬ್ಬ ಹ್ಞೂಂ ಅನ್ನಾಕ ಗಟ್ಟಿ ಹುಡ್ಗ ಸಿಕ್‌ಬಿಟ್ಟೇದಿ. ಗುರು-ಶಿಷ್ಯರು ಇಬ್ರೂ ಬೇಸಿ ಕಲ್ತೀರಿ' ಎಂದು ಬಿಸಿಬಿಸಿ ರಾಗಿ ಗಂಜಿಯ ಲೋಟಗಳನ್ನು ಸ್ಟೂಲ್ ಮೇಲಿಟ್ಟು ಹೋಗಿದ್ದು ನನಗೆ ಈಗಲೂ ನೆನಪಿದೆ.

ಆ ದಿನಗಳಲ್ಲಿ ಅವರ ಬಳಿ ಪದೇಪದೇ ಹೋಗುತ್ತಿದ್ದ ನನಗೆ

ಬಳ್ಳಾರಿ ಜಿಲ್ಲೆಯ ಜನಪದ ಕಲೆಗಳ ಬಗ್ಗೆ ಎಷ್ಟೊಂದು ಮಾಹಿತಿ ನೀಡಿದ್ದರೆಂದರೆ, ಅದುವರೆಗೂ ಹಗರಿಬೊಮ್ಮನಹಳ್ಳಿಯ ಹೆಸರನ್ನೂ ಕೇಳಿರದ ನನಗೆ ಆ ತಾಲೂಕಿನ ಎಲ್ಲಾ ಪ್ರಮುಖ ಜನಪದ ಕವಿ ಕಲಾವಿದರ ಬಗ್ಗೆ ಹೆಚ್ಚಾಗಿ ತಿಳಿದುಕೊಂಡಿಬಿಟ್ಟಿದ್ದೆ. ಯಡ್ರಾಮನಹಳ್ಳಿಯ ಕೆ. ದೊಡ್ಡಭರಮಪ್ಪ ಮತ್ತು ಕುಟುಂಬ, ತೊಗಲು ಬೊಂಬೆಯಾಟ, ಬೊಂಬೆಗಳ ನಿರ್ಮಾಣ ಕಲೆ, ಗುರುಮೂರ್ತಿ ಪೆಂಡಕೂರರ ಸ್ನೇಹ ಮತ್ತು ಅವರೊಂದಿಗೆ ಕೈಗೊಂಡ ಸಾಹಿತ್ಯಕ ಸಾಹಸ ಕಾರ್ಯಗಳು, ಜಾನಪದ ಸಮ್ಮೇಳನಗಳು, ಜನಪದ ಸಾಹಿತ್ಯ ಸಂಗ್ರಹಿಸುವಾಗ ತಮಗಾದ ಅನುಭವಗಳು, ಕನಕಗಿರಿಯ ಜಯತೀರ್ಥ ರಾಜಪುರೋಹಿತರ ಒಡನಾಟ, ಎಲ್ಲಕ್ಕೂ ಮಿಗಿಲಾಗಿ ಪಶ್ಚಿಮ ಜರ್ಮನಿಯಲ್ಲಿ 1986ರಲ್ಲಿ ನಡೆದ ಅಂತರ್‍ರಾಷ್ಟ್ರೀಯ ಗೊಂಬೆ ಆಟಗಳ ಉತ್ಸವದಲ್ಲಿ, ಪೆಂಡಕೂರರೊಂದಿಗೆ ದೊಡ್ಡಭರಮಪ್ಪನವರ ಕಿಳ್ಳೇಕ್ಯಾತರ ತಂಡವನ್ನು ಕೊಂಡೊಯ್ದಾಗಿನ ಅನುಭವ, ಕವಿಗಳೊಂದಿಗೆ ಪತ್ರ ವ್ಯವಹಾರ ಮಾಡುವ ಕಲೆ, ಪುಸ್ತಕ ಪ್ರಕಟಣೆ, ಸಾದರ ಸ್ವೀಕಾರಕ್ಕಾಗಿ ಪತ್ರಿಕೆಗಳಿಗೆ ಕಳಿಸುವ ರೀತಿ, ಸುದ್ದಿ ಪತ್ರಿಕೆಗಳಲ್ಲಿ ಬಂದ ವರದಿಯನ್ನು ಫೈಲ್‌ಮಾಡಿಕೊಳ್ಳುವ ಬಗೆ.... ಹೀಗೆ ಅನೇಕ ವಿಷಯಗಳ ಬಗ್ಗೆ ಸಮಗ್ರ ಮಾಹಿತಿಯನ್ನು ನನಗೆ ಧಾರೆ ಎರೆದಿದ್ದರು.

'ನೀವ್ ನಮ್ಮನೀಗಿ ಬಂದ್ರ ನಮ್ಗ್ ಬಾಳ ಹಗುರಾಕೈತ್ರಿ. ನಮ್ಗ್ ಯಾರಿಗೂ ಸಾಹಿತ್ಯದ ಬಗ್ಗೆ ಗೊತ್ತಿಲ್ಲ. ಅದರಾಗ ಇಂಟ್ರೆಷ್ಟೂ ಇಲ್ಲ. ಅಪ್ಪೋರು ಅದನ್ನು ಉಸಿರಾಡಸ್ತಾರ. ನೀವು ಬಂದು ಹೋದ ಮ್ಯಾಲ ಪರಿಬಿಚ್ಚಿದ ಹಾವ್ನಂಗ ಚುರುಕಾಗ್ತಾರ. ಅದ್ಕ ನೀವು ಗಿನಾ ಬಂದ್ರೂ ಇನ್ನೂ ಬೇಸಿ ಆಗ್ತೈತಿ' ಎಂದು ಕೆ. ಗಂಗಾಧರಗೌಡರು ಹೇಳಿದ್ದರು. ಆದರೆ ಅವರು ಕಾರಟಗಿಗ ಮನೆ ಮಾಡಿದ ಮೇಲೆ ಆ ಊರು ಗಂಗಾವತಿಯಿಂದ 20 ಕಿ.ಮೀ. ದೂರವಿರುವುದರಿಂದ ಪದೇಪದೇ

ಹೋಗಿಬರಲಾಗಲಿಲ್ಲ. ಅಲ್ಲಿನ ಯುವ ಬರಹಗಾರರನ್ನು ಪರಿಚಯಿಸಿಕೊಂಡ ಗೌಡರಿಗೆ ಅನಾರೋಗ್ಯ ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳುತ್ತ ಬಂದಿದ್ದರಿಂದ ಮಾತುಗಾರಿಕೆಯಲ್ಲಿ ನಿರಾಸಕ್ತಿ ಉಂಟಾಯಿತು. ಸ್ನಾಯುಗಳ ಸೆಳೆತ ವಿಪರೀತವಾಯಿತು. ಮೂಳೆಗಳು ಸತ್ವವನ್ನು ಕಳೆದುಕೊಂಡವು. ಮೊಣಕಾಲ ನೋವು, ಸೊಂಟ ನೋವು ಜೀವ ಹಿಂಡತೊಡಗಿದವು. ಶೌಚ, ಸ್ನಾನಾದಿಗಳಿಗೆ ಗೌಡರು ಮತ್ತೊಬ್ಬರನ್ನು ಅವಲಂಬಿಸುವದು ಅನಿವಾರ್ಯವಾಯಿತು. ಹೆಂಡತಿ, ಮಗ, ಸೊಸೆಗೆ ಭಾರವಾದೆ ಎಂಬ ವಿಚಾರ ಅವರ ಮನಸ್ಸನ್ನು ತುಂಬಾ ಕಾಡಿರಬೇಕು. ಪರಿಣಾಮ ಗೌಡರು ದೃಢನಿಶ್ಚಯಕ್ಕೆ ಬಂದರು. ಅದರು 'ಪ್ರಾಣ ತ್ಯಾಗ! ಸತತವಾಗಿ 30 ದಿನಗಳ ಕಾಲ ಆಹಾರ ವಿಮುಖರಾದರು ಮತ್ತು ಔಷಧ ನಿರಾಕರಿಸಿದರು. ಮನೆಮಂದಿಯೆಲ್ಲ ಎಷ್ಟೆ ಒತ್ತಾಯಿಸಿದರೂ ಬಲವಂತವಾಗಿ ತಿನ್ನಿಸಲು ಪ್ರಯತ್ನಿಸಿದರೂ ಅದಕ್ಕೆ ಸಹಕರಿಸದ ಗೌಡರು ಕಡೆಗೂ ತಮ್ಮ ಹಟವನ್ನೇ ಸಾಧಿಸಿದರು. 2007ನೇ ಇಸ್ವಿಯಲ್ಲಿ ಡಿಸೆಂಬರ್ 12ರಂದು ಭೂಮಿಯ ಋಣದಿಂದ ಮುಕ್ತರಾದರು. 70 ವರ್ಷಗಳ ಕಾಲ ಜೀವಿಸಿದ ಗೌಡರು 5 ದಶಕಗಳ ತಮ್ಮ ಸಮಯವನ್ನು ಜನಪದ ಸಾಹಿತ್ಯಕ್ಕಾಗಿಯೇ ಮೀಸಲಿಟ್ಟಿದ್ದು ಇಲ್ಲಿ ಗಮನಾರ್ಹ.

## ಕೆ. ವಿರೂಪಾಕ್ಷಗೌಡ

ಬಳ್ಳಾರಿ ಜಿಲ್ಲೆಯ ಜಾನಪದ ಕ್ಷೇತ್ರದ ಸಾಧಕರಲ್ಲಿ ಕೆ. ವಿರೂಪಾಕ್ಷಗೌಡರೂ ಒಬ್ಬರು. ಗ್ರಾಮೀಣ ಪ್ರದೇಶದ ಸಾಮಾನ್ಯ ಜನರ ಬದುಕು ಬವಣೆ, ಹಾಡುಪಾಡುಗಳ ನಿಕಟ ಸಂಪರ್ಕವಿದ್ದ ಅವರು ಜನಪದದಲ್ಲಿ ತನಿಯಾಗಿ ನೆಲೆಯೂರಿದ್ದ ಜನಪದ ಸಾಹಿತ್ಯವನ್ನು ಶ್ರಮಪಟ್ಟು ಸಂಗ್ರಹಿಸಿ, ನಾಜೂಕಾಗಿ ಸಂಪಾದಿಸಿ, ಆರ್ಥಿಕ ಲಾಭ ನಷ್ಟವನ್ನು ಪರಿಗಣಿಸದೆ ಪ್ರಕಟಿಸಿ, ಕನ್ನಡ ಜಾನಪದದ ಅಧ್ಯಯನಕ್ಕೆ ಆಕರ ಸಾಮಗ್ರಿಯನ್ನು ಒದಗಿಸಿದರು. ತಮ್ಮಂತೆ ಆಸಕ್ತರು ಯುವಕರು ಜನಪದ ಪ್ರೀತಿ ಗಳಿಸಿಕೊಳ್ಳಲು ಕಾರಣರಾದರು.

ಸೃಜನಶೀಲ ಲೇಖಕರೂ ಆದ ವಿರೂಪಾಕ್ಷಗೌಡರ ಬದುಕು ಬರಹವನ್ನು ರಾಘವೇಂದ್ರ ದಂಡಿನ್ ಅವರು ಆತ್ಮೀಯವಾಗಿ ಪರಿಚಯಿಸಿದ್ದಾರೆ.

–ಪ್ರೊ. ಡಿ. ಲಿಂಗಯ್ಯ

**ಕರ್ನಾಟಕ ಜಾನಪದ ಪರಿಷತ್ತು**

ನಂ. ೧, ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–೫೬೦ ೦೫೪